# ದಲಿತ – ಬಂಡಾಯ : ಕವಿತೆ, ಕಥೆ, ಕಾದಂಬರಿ

ಡಾ. ಚಾಮರಾಜ ಕಮ್ಮಾರ

ದಲಿತ ಎಂಬ ಪದವನ್ನು ಅರ್ಥೈಸಲು ಮತ್ತು ದಲಿತ ಎಂದರೆ ಯಾರು? ಎಂದು ವ್ಯಾಖ್ಯಾನಿಸಲು ಹಲವಾರು ವಿದ್ವಾಂಸರು ಪ್ರಯತ್ನದೊಂದಿಗೆ ಅನೇಕ ಚರ್ಚೆಗಳನ್ನು ಮಾಡಿರುವರು. ದಲಿತ ಎಂಬ ಪದ ಪ್ರಗತಿಪರ ಬರಹಗಾರರ ಸಂದರ್ಭದಲ್ಲಿ ಬಂದಿದೆ. ದಲಿತ ಪದಕ್ಕೆ ವ್ಯಾಖ್ಯಾನಗಳನ್ನು ಗಮನಿಸಿದರೆ ಶೋಷಣೆ ಎಂಬ ಪದಕ್ಕೆ ಜಾತಿ ಭೇದವಿಲ್ಲ ಆರ್ಥಿಕ ಸಾಮಾಜಿಕ ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಎಲ್ಲ ಜನರು ದಲಿತರು. ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಸಿಕೊಳ್ಳುವ ಅಸ್ಪೃಶ್ಯರು ಎಲ್ಲರೂ ದಲಿತರು. ಅಸ್ಪೃಶ್ಯರು ಸೇರಿದಂತೆ ಅಸ್ಪಶ್ಯತೆಯನ್ನು ಅನುಭವಿಸಿದ್ದರು. ಅಸ್ಪೃಶ್ಯರ ಹಾಗೆ ಆರ್ಥಿಕ ಸಾಮಾಜಿಕ ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಬಡವರು ದಲಿತರು ಎಂದು ಕರೆಯಿಸಿಕೊಳ್ಳುತ್ತಾರೆ.

**ದಲಿತ ಪದ ವಿಚಾರ :**

ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ 1973 ಸಂದರ್ಭದಲ್ಲಿ ಅಸ್ಪೃಶ್ಯರನ್ನು 'ಅತಿಶೂದ್ರರು' ಎಂದು ಕರೆಯಲಾಗಿದೆ. ಏಕೆಂದರೆ ಒಕ್ಕೂಟ ಶೂದ್ರರಿಂದ ಕೂಡಿತ್ತು. ಅದೊಂದು ಎರಡನೇ ಬ್ರಾಹ್ಮಣೇತರರ ಚಳುವಳಿ. 1918 ರಲ್ಲಿ ಮೊದಲ ಬ್ರಾಹ್ಮಣೇತರ ಚಳುವಳಿ ಜರುಗಿತ್ತು. ಆಗ ಅಸ್ಪೃಶ್ಯರು ತಮ್ಮನ್ನು 'ಆದಿ ಕರ್ನಾಟಕ' 'ಆದಿ ದ್ರಾವಿಡ' ಎಂದು ಕರೆದುಕೊಂಡಿರುವುದು ಕಂಡುಬರುತ್ತದೆ. 1943 ರಿಂದ ಕಾಣಿಸಿಕೊಂಡ ಪ್ರಗತಿಶೀಲ ಚಳವಳಿ ಪುನಃ 1975ರಲ್ಲಿ 'ಪ್ರಗತಿಪಂಥ' ಎಂಬ ಹೆಸರಿನಿಂದ ಕಾಣಿಸಿಕೊಂಡಿದೆ. ಈ ಸಂದರ್ಭದಲ್ಲಿ 'ದಲಿತ' ಎಂಬ ಪದ ಮೊದಲ ಬಾರಿಗೆ ಬಳಕೆ ಕಂಡುಬರುತ್ತದೆ. 'ಪ್ರಗತಿಪಂಥ'ದೊಂದಿಗೆ 'ದಲಿತಪಂಥ'ಒಂದಾಗಿ ಸೇರಿ ಬಂದ ಕಾಲವದು. ಬಂಡಾಯದ ಸಂದರ್ಭದಲ್ಲಿ ಶೋಷಣೆಗೆ ಒಳಪಟ್ಟವರೆಲ್ಲ ದಲಿತರು ಎಂದು ವ್ಯಾಖ್ಯಾನಿಸಿದಾಗ ಅಸ್ಪೃಶ್ಯರನ್ನು ಗುರುತಿಸಲು 'ತರದಲಿತ' ಎಂಬ ಪದ ಬಳಕೆಯಾಗಿದೆ. ಇನ್ನು ಕೆಲವರು 'ಪದದಲಿತ' ಎಂದು ಕರೆದಿದ್ದಾರೆ.

'ದಲ' ಎಂಬುದು ಸಂಸ್ಕೃತ ಪದ. ದಲ ಎಂದರೆ ಚೂರು, ತುಂಡು, ಭಾಗ, ಸೈನ್ಯ, ಎಂಬ ಅರ್ಥಗಳಿವೆ. ಆದ್ದರಿಂದ ಇಲ್ಲಿ ಸೈನ್ಯದ ಹರಿತವಾದ ಶಸ್ತ್ರ ಎನ್ನುವ ಅರ್ಥ ಸಮಂಜಸವೆಂದು ಎಂದು ಕೆಲವರು ವಾದಿಸಿದರೆ, ನಿಘಂಟುಗಳಲ್ಲಿ ದಲಿತ ಎಂದರೆ "ಹಿಂದುಳಿದವನು, ದಮನಕ್ಕೆ ಒಳಗಾದವನು, ಆರ್ಥಿಕವಾಗಿ, ಸಾಮಾಜಿಕವಾಗಿ ಕೆಳಮಟ್ಟದವರು" ಎಂದರ್ಥವೆಂದಿದ್ದಾರೆ. (ಕ.ಸಾ.ಪ ನಿಘಂಟು, ಸಂಪುಟ–4 4828) ಶತಮಾನಗಳಿಂದ ತುಳಿತಕ್ಕೆ ಒಳಗಾದವರು ಅಸ್ಪೃಶ್ಯರೇ ಆಗಿದ್ದಾರೆ. ಹೀಗಾಗಿ ಆರ್ಥಿಕ, ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಶಕ್ತಿಗಳ ಜೊತೆಗೆ ಅಸ್ಪೃಶ್ಯತೆಯ ಸೂಕ್ಷ್ಮ ಸಂಬಂಧದ ಎಳೆ ಇರುವುದರಿಂದ ದಲಿತ ಎಂದರೆ ಕೇವಲ ಅಸ್ಪೃಶ್ಯನಲ್ಲ ಎನ್ನುವುದನ್ನು ಈ ಪದ ವಿವರಿಸುತ್ತದೆ.

ದಲಿತರನ್ನು ಅಸ್ಪೃಶ್ಯರು, ಅಂತ್ಯಜರು, ಅಂತ್ಯವಸಾಯಿ, ದಸ್ಯು, ಆದಿಮ ಜನಾಂಗ, ತಿರಕುಲತ್ತರ್, ಪಂಚಮರು, ಬಹಿಷ್ಕೃತರು, ಆದಿಕರ್ನಾಟಕ, ಆದಿದ್ರಾವಿಡ, ಅನುಸೂಚಿತ, ಪರಿಶಿಷ್ಟ ಜಾತಿ, ಹರಿಜನ ಎಂದು ಮುಂತಾಗಿ ಕರೆಯುತ್ತಿದ್ದ ಬಗ್ಗೆ ಇತಿಹಾಸ ಸಾಕ್ಷಿ ಇದೆ. ಇದರಲ್ಲಿ ಕೆಲವು ಪದಗಳು ವೃತ್ತಿ ಹಾಗೂ ಇರುವಿಕೆಯನ್ನು ಸೂಚಿಸಿದರೆ, ಕೆಲವು ಜಾತಿವಾಚಕವಾಗಿ ಜನಾಂಗವಾಚಕವಾಗಿ ಬಳಕೆಯಾಗಿವೆ. 'ಹರಿಜನ' ಎನ್ನುವ ಪದವನ್ನು ಮಹಾತ್ಮ ಗಾಂಧೀಜಿಯವರು ಬಳಕೆಗೆ ತಂದರು ಎಂದು ಹೇಳಲಾಗುತ್ತದೆ ಆದರೆ ವಾಸ್ತವವಾಗಿ 17ನೇ ಶತಮಾನದಲ್ಲಿ ಹರಿದಾಸರು ಅಸ್ಪೃಶ್ಯರನ್ನು 'ಹರಿಜನ' ಎಂದು ಕರೆದರು. ಇತಿಹಾಸದಲ್ಲಿ ಹುದುಗಿಹೋಗಿದ್ದ ಈ ಪದವನ್ನು ಮಹಾತ್ಮ ಗಾಂಧೀಜಿಯವರು ಮತ್ತೆ ಬಳಕೆಗೆ ತಂದರು.

1973 ರ ಸಂದರ್ಭದಲ್ಲಿ ಬಿ. ಬಸಲಿಂಗಪ್ಪನವರು 'ಕನ್ನಡ ಸಾಹಿತ್ಯ ಬೂಸಾ' ಎಂದು ಕರೆದುದರ ಪರಿಣಾಮವಾಗಿ ದಲಿತರೆಲ್ಲ ಒಂದಾಗಲು ಅವಕಾಶವಾಯಿತು. ಈ ಬೂಸಾ ಪ್ರಕರಣ ದೊಡ್ಡ ಕೋಲಾಹಲವನ್ನೇ ತಂದಿತು. ಈ ಸಂದರ್ಭದಲ್ಲಿ ಸ್ವಾಭಿಮಾನ ಆತ್ಮಸ್ಥೈರ್ಯ ಕಾಣಿಸಿಕೊಂಡವು. ಅಸ್ಪೃಶ್ಯರು ತಮ್ಮ ಜಾತಿಗಳ ಹೆಸರಿನೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಕೆಚ್ಚು ತೋರಿದರು 'ಹರಿಜನ' ಎಂಬ ಪದವನ್ನು ಬಳಸಲು ನಿರಾಕರಿಸಿದರು. "ನಾವು ಹರಿಯ ಮಕ್ಕಳಲ್ಲ, ನಾವು ಮನುಷ್ಯರ ಮಕ್ಕಳೇ" ಎಂಬ ದಲಿತ ಪ್ರಜ್ಞೆಯೊಂದಿಗೆ ಸ್ವಾಭಿಮಾನದೊಂದಿಗೆ 'ದಲಿತ' ಪದವನ್ನು ರೂಢಿಯಲ್ಲಿ ತಂದರು. ಇದಕ್ಕೂ ಮೊದಲು ಈ ಪದವು ಮಹಾರಾಷ್ಟ್ರದಲ್ಲಿ ಬಳಕೆಯಲ್ಲಿತ್ತು.

ಅರವಿಂದ ಮಾಲಗತ್ತಿಯವರು "ಶತಮಾನಗಳಿಂದ ಜನಸಮುದಾಯದಲ್ಲಿ ಆರ್ಥಿಕ ಸಾಮಾಜಿಕ ರಾಜಕೀಯ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು. ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾಗದೆ, ಊರಹೊರಗೆ ವಾಸಿಸಿ ಕೀಳುವೃತ್ತಿಗೆ ಅವಲಂಬಿತರಾಗಿ, ಹೆಸರು ಹೇಳಿಕೊಳ್ಳಲೂ ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ. (ದಲಿತ ಸಾಹಿತ್ಯ ಚಳುವಳಿಯ ತಾತ್ವಿಕ ಚಿಂತನೆ: ಅರವಿಂದ್ ಮಾಲಗತ್ತಿ)

ಈ ವ್ಯಾಖ್ಯಾನವು ಸರ್ಕಾರ ನಿರ್ಧರಿಸಿದ ಅಸ್ಪೃಶ್ಯರ ಪಟ್ಟಿಯನ್ನು ನಿರಾಕರಿಸುತ್ತದೆ. ಅಸ್ಪೃಶ್ಯರಲ್ಲದವರು ಸರ್ಕಾರದ ಪಟ್ಟಿಯಲ್ಲಿದ್ದಾರೆ. ಎಷ್ಟೋ ಜನ ಅಸ್ಪೃಶ್ಯರು ಸರ್ಕಾರದ ಪಟ್ಟಿಯ ಹೊರಗಿದ್ದಾರೆ ಎನ್ನುವುದನ್ನು ಅನುಲಕ್ಷಿಸಿ ರೂಪವನ್ನು ಪಡೆದುಕೊಂಡಿದೆ.

ದಲಿತರಾದವರೆಲ್ಲ ದಲಿತಪ್ರಜ್ಞೆ ಉಳ್ಳವರಾಗಿರುತ್ತಾರೆ ಎಂದಲ್ಲ ದಲಿತಪ್ರಜ್ಞೆ ಇಲ್ಲದವರು ದಲಿತರಲ್ಲವೆಂದಲ್ಲ, ಅವರನ್ನು ಪ್ರಜ್ಞಾವಂತ ದಲಿತರನ್ನಾಗಿಸುವ ಜೊತೆಗೆ ಸಾಂಪ್ರದಾಯಿಕ ಜನತೆಯನ್ನೂ ಪ್ರಜ್ಞಾವಂತ ಜನತೆಯನ್ನಾಗಿಸಲು ಹಂಬಲಿಸುವುದು ಇವರ ಭಾವನೆ. ಸಾಂಪ್ರದಾಯಿಕ ಹಾಗೂ ಪ್ರಗತಿಪರ ಎಂಬ ಎರಡು ವರ್ಗಗಳು ಇದ್ದೇ ಇರುತ್ತವೆ ಎನ್ನುವ ವಾಸ್ತವಪ್ರಜ್ಞೆಯು ಅರಿವಿರಬೇಕು.

ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯ ಎಂಬ ಪರಿಭಾಷೆಗಳ ಅರ್ಥ ವಿವೇಚನೆ

ಬಸವರಾಜ ಸಬರದರವರು "ಕ್ರೂರವ್ಯವಸ್ಥೆಯ ವಿರುದ್ಧ,ಯಜಮಾನ ಸಂಸ್ಕೃತಿಯ ಎಲ್ಲ ಸಂಚುಗಳ ವಿರುದ್ಧ ಬಂಡೆದ್ದ ಪ್ರಗತಿಪರ ಮನೋಧರ್ಮವೇ ಬಂಡಾಯ ಸಾಹಿತ್ಯ ಚಳುವಳಿಯ ಮೂಲ ಸತ್ವವಾಯಿತು" ಎನ್ನುತ್ತಾರೆ. ದಲಿತ ಬವಣೆಯೇ ಉಸಿರಾಗಿರುವ ಸಾಹಿತ್ಯ ದಲಿತರಿಂದ ಸೃಷ್ಟಿಯಾಗಿರುತ್ತದೆಯೇ ಹೊರತು ಅದನ್ನು ಫೀಲ್ ಮಾಡುವುದರಿಂದಲ್ಲ –ಸಿದ್ಧಲಿಂಗಯ್ಯ

ಬರಗೂರುರಾಮಚಂದ್ರಪ್ಪನವರು– 'ಬಂಡಾಯ' ಎಂಬ ಪದ ಸಾಮೂಹಿಕ ಆಶಯವನ್ನು ಕುರಿತದ್ದೇ ಹೊರತು ವ್ಯಕ್ತಿಯ ಹುಟ್ಟನ್ನಲ್ಲ. ಈ ಕಾರಣದಿಂದಲೇ ಹುಟ್ಟಿನಿಂದ ಪ್ರತಿಗಾಮಿ ಆಶಯಗಳನ್ನು ಅಭಿವ್ಯಕ್ತಿಸಿದ ಸಾಹಿತಿ ಬಂಡಾಯ ಸಾಹಿತ್ಯದ ಪಟ್ಟಿಗೆ ಸೇರುವುದಿಲ್ಲ. ಮತ್ತೊಮ್ಮೆ ಸ್ಪಷ್ಟಪಡಿಸಬೇಕೆಂದರೆ – ಪ್ರತಿಗಾಮಿ ದಲಿತ ಸಾಹಿತಿಗಳೆಲ್ಲ ಬಂಡಾಯ ಸಾಹಿತಿಗಳು. ಬಂಡಾಯ ಸಾಹಿತಿಗಳೆಲ್ಲರೂ ದಲಿತ ಸಾಹಿತಿಗಳಲ್ಲ"ಎನ್ನುತ್ತಾರೆ. ಈ ಬಗ್ಗೆ ಅನೇಕ ಚರ್ಚೆಗಳು ನಡೆದವು.

ಪ್ರತ್ಯೇಕ ಅಸ್ತಿತ್ವಕ್ಕಾಗಿ ಒಳ ಹೋರಾಟವನ್ನು ಆರಂಭಿಸಿದ್ದು 1983 ಡಿಸೆಂಬರ್ ಹತ್ತು–ಹನ್ನೊಂದರಂದು ಧಾರವಾಡದಲ್ಲಿ ಹಾಗೂ 1986ರ ಡಿಸೆಂಬರ್ 21ರಲ್ಲಿ 'ದಲಿತ ಲೇಖಕರ, ಕಲಾವಿದರ ಬಳಗ'ದ ಹೆಸರಿನಡಿ ಬೆಂಗಳೂರಿನಲ್ಲಿ ಸಮ್ಮೇಳನ ನಡೆಸಿ ಬಂಡಾಯ ಸಾಹಿತ್ಯ ಸತ್ತುಹೋಗಿದೆ ಎಂಬ ಘೋಷಣೆಯನ್ನು ಮಾಡಿತು ಇದಕ್ಕೆ ಪುಷ್ಟಿ ನೀಡುವಂತೆ ಅರವಿಂದ ಮಾಲಗತ್ತಿಯವರು ಬಂಡಾಯ ಸಾಹಿತ್ಯದ ಒಂದು ಭಾಗವೇ ದಲಿತ ಸಾಹಿತ್ಯ ಏಕಾಗಬೇಕು ಸಾಹಿತ್ಯದ ಒಂದು ಭಾಗ ಬಂಡಾಯವಾಗಬಾರದು? ಎಂದಿದ್ದಾರೆ.

ರಹಿಮತ್ ತರೀಕೆರೆಯವರ ಅಭಿಮತದಂತೆ – ದಲಿತರಾದ ಅವರು ತಮ್ಮ ರಕ್ತ ಮಾಂಸಗಳ ಜೀವಂತ ಅನುಭವ ಅನಿಸಿಕೆಗಳನ್ನು ಹಿಡಿದಿಟ್ಟಿರುವುದು ಮಾತ್ರ ದಲಿತ ಸಾಹಿತ್ಯ. ಸಮಾಜದ ಎಲ್ಲ ವರ್ಗದ ಜನರು ತಾವು ಅನುಭವಿಸುತ್ತಿರುವ ನೋವು ಅಪಮಾನ ಅನ್ಯಾಯಗಳ ವಿರುದ್ಧ ಬಂಡೆದ್ದು ಬರೆದದ್ದು ಬಂಡಾಯ ಸಾಹಿತ್ಯ ಎಂದಿದ್ದಾರೆ.

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಶತಮಾನಗಳಿಂದ ಶೋಷಣೆಗೆ ಅವಮಾನಕ್ಕೆ ಅವರಿಗೆ ಬಲಿಯಾದ ದಲಿತ ಪ್ರಜ್ಞಾವಂತ ಸಾಹಿತ್ಯ –ಚಂಪಾ. ಡಾ.ಅಂಬೇಡ್ಕರ್–ಡಿಪ್ರೆಸ್ಡ್ ಎಂಬ ಪದವನ್ನು ದಲಿತ ಅದಕ್ಕೆ ಸಮಾನವಾಗಿ ಬಳಸಿದ್ದಾರೆ.

ಇವೆಲ್ಲ ಮಾತುಗಳನ್ನು ಪರಿಗಣಿಸಿದಾಗ ಬಂಡಾಯದ ಒಳಗಿಂದಲೇ ದಲಿತ ಎಂಬ ಪಂಥ ಮೂಡಿತು. ದಲಿತ ಕಾದಂಬರಿಕಾರರೂ ಬಂಡಾಯ ಕಾದಂಬರಿಕಾರರೇ ಆಗಿದ್ದರೂ, ದಲಿತ ವರ್ಗದಲ್ಲಿ ಹುಟ್ಟಿದವರು ಮಾತ್ರ ದಲಿತರ ಸಂವೇದನೆಗಳನ್ನು ಯಥಾರ್ಥವಾಗಿ ಚಿತ್ರಿಸುವ ನಿಲುವಿನಿಂದ ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಗುರುತಿಸಿಕೊಂಡವರು ಈ ಪಂಥದವರು. ದಲಿತ–ಬಂಡಾಯ ಪಂಥದಲ್ಲಿ ಬೆರಳೆಣಿಕೆಯಲ್ಲಿ ಕೆಲವು ಉತ್ತಮ ಕಾದಂಬರಿಕಾರರು ಬಂದಿದ್ದಾರೆ. ಅವರಲ್ಲಿ ಅತ್ಯಂತ ಗಮನೀಯರಾದವರು ದೇವನೂರು ಮಹಾದೇವರು. 1974ರಲ್ಲಿ ಕೆಲವು ಮಂದಿ ಲೇಖಕರು ಸೇರಿಕೊಂಡು ಬಂಡಾಯ ಸಂಘಟನೆಯನ್ನು ಸ್ಥಾಪಿಸಿದರು ಸಮಾಜದಲ್ಲಿ ನಡೆಯುತ್ತಿರುವ ಶೋಷಣೆ, ಅನ್ಯಾಯಗಳನ್ನು ಪ್ರತಿಭಟಿಸುವ ಮಾಧ್ಯಮ ಸಾಹಿತ್ಯವಾದ ಬೇಕೆಂಬುದು ಅವರ ಧೋರಣೆಯಾಗಿತ್ತು. ನವೋದಯದ ಭಾವುಕ, ಕಲ್ಪನಾ ವಿಲಾಸವನ್ನೂ, ನವ್ಯದ ವ್ಯಕ್ತಿನಿಷ್ಠವಾದ, ಜನ ದೂರವಾದ ಸಾಹಿತ್ಯ ಧೋರಣೆ ಇವೆರಡನ್ನು ಬಂಡಾಯದವರು ಪ್ರಬಲವಾಗಿ ವಿರೋಧಿಸಿದರು. ಇವರಲ್ಲಿ ಹೆಚ್ಚಿನವರು ಮಾರ್ಕ್ಸವಾದ, ಸಮತಾವಾದ, ಸಮಾಜವಾದ, ಲೋಹಿಯಾವಾದಗಳಂತಹ ಎಡಪಂಥೀಯ ಧೋರಣೆಗಳಿಂದ ಪ್ರಭಾವಿತರಾಗಿದ್ದರು. ಧೋರಣೆಯ ದೃಷ್ಟಿಯಿಂದ ಪ್ರಗತಿಶೀಲ ಪಂಥದವರಿಗೂ, ಬಂಡಾಯದವರಿಗೂ ವಿಶೇಷ ವ್ಯತ್ಯಾಸಗಳೇನೂ ಇರಲಿಲ್ಲ. ವ್ಯತ್ಯಾಸವಿದ್ದು ಧೋರಣೆಯ ಪ್ರಸ್ತುತಿಯಲ್ಲಿ ಮಾತ್ರ. ಪ್ರಗತಿಶೀಲ ಕಾದಂಬರಿಕಾರರು ಸಾಹಿತಿಗಳು ಶೋಷಣೆ ದಬ್ಬಾಳಿಕೆಗಳನ್ನು ಸಮರ್ಥವಾಗಿ ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದರೂ ಅವುಗಳಲ್ಲಿ ಶಕ್ತವಾದ ಪ್ರತಿಭಟನೆಯನ್ನು, ಬಂಡಾಯವನ್ನು ತೋರಿಸುವುದರಲ್ಲಿ ಅವರು ವಿಫಲರಾಗಿದ್ದರು. ಬಂಡಾಯ ಕಾದಂಬರಿಕಾರರು ದಲಿತರ, ಶೋಷಿತರ ಸಮಸ್ಯೆಗಳನ್ನು ಅದರ ಬಹುಮುಖಿ ಸ್ವರೂಪದಲ್ಲಿ ವಿಶ್ಲೇಷಿಸಿ, ಸಾಕಷ್ಟು ದೊಡ್ಡ ಸ್ಥಳದಲ್ಲಿಯೇ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಬಂಡಾಯ ಪಂಥದಲ್ಲಿ ಅನಂತರದಲ್ಲಿ ಒಂದು ಸೂಕ್ಷ್ಮ ಅಂತರದ ಕಾರಣ ಹುಟ್ಟಿ ಕೊಂಡ ಪಂಥ ದಲಿತ ಪಂಥ.

ಬಂಡಾಯ ದಲಿತ ಪಂಥದ ಅವರಲ್ಲಿ ಸಾಹಿತ್ಯದ ಧೋರಣೆಯನ್ನು ಕುರಿತು ಮೂಲಭೂತವಾದ ವ್ಯತ್ಯಾಸವೇನೂ ಇಲ್ಲ. ಎಂಬತ್ತರ ದಶಕದಲ್ಲಿ ಉತ್ತರಭಾರತದ ಕೆಳಗಡೆ ರಾಜಕೀಯ ಶಕ್ತಿಯಾಗಿ ಬೆಳೆಯತೊಡಗಿದ ದಲಿತ ಸಂಘಟನೆ ಕನ್ನಡ ದಲಿತ ಲೇಖಕರಲ್ಲಿ ಒಂದು ಅನನ್ಯತೆಯ ಪ್ರಶ್ನೆಯನ್ನು ಮೂಡಿಸುವುದರ ಫಲವೇ ದಲಿತ ಪಂಥ. ಶತಮಾನಗಳ ಕಾಲ ಮೇಲುವರ್ಗದವರ, ಉಳ್ಳವರ ತುಳಿತಕ್ಕೆ ಒಳಗಾಗಿ, ನೋವು, ಅಪಮಾನಗಳನ್ನು ನುಂಗುತ್ತಾ ಬಂದಿರುವ ತಮ್ಮ ಸಮುದಾಯದ ಅಳಲು, ಆಕ್ರೋಶಗಳನ್ನು ಎಷ್ಟೇ ಸಹಾನುಭೂತಿ ಇದ್ದರು ತಮ್ಮ ಸಮುದಾಯದವರಲ್ಲದ ಲೇಖಕರು ನೈಜವಾಗಿ ಬಿಂಬಿಸಲಾರರು ಎಂಬುದೇ ದಲಿತರ ಪ್ರಾಮಾಣಿಕವಾದ ಅನಿಸಿಕೆಯಾಗಿತ್ತು. ಅದುದರಿಂದಲೇ ಎಲ್ಲ ದಲಿತರೂ ಬಂಡಾಯಗಾರರು ಎಂದು ಕರೆಸಿಕೊಳ್ಳಬಹುದು ಆದರೆ ಎಲ್ಲ ಬಂಡಾಯಗಾರರು ದಲಿತ ಆಗುವುದಕ್ಕೆ ಸಾಧ್ಯವಿಲ್ಲ. ಈ ಸಣ್ಣ ಭೇದವನ್ನು ಬಿಟ್ಟರೆ ಸಾಹಿತ್ಯದ ಒಟ್ಟು ಸ್ವರೂಪದ ನೆಲೆಯಲ್ಲಿ ಬಂಡಾಯ ದಲಿತ ಎರಡನ್ನೂ ಒಂದೇ ಎಂಬುದಾಗಿ ಪರಿಗಣಿಸಬಹುದಾಗಿದೆ.

ಅರವಿಂದ ಮಾಲಗತ್ತಿಯವರು ದಲಿತ ಸಾಹಿತ್ಯವನ್ನು ಈ ಕೆಳಗಿನ ರೀತಿ ವಿಭಜನೆ ಮಾಡಿದ್ದಾರೆ. 1. ದಲಿತರ ಕುರಿತು ಯಾರು ಬರೆದರು ದಲಿತ ಸಾಹಿತ್ಯವಾಗುತ್ತದೆ. 2.ದಲಿತರೇ ಬರೆದದ್ದು ದಲಿತ ಸಾಹಿತ್ಯವಾಗುತ್ತದೆ. 3.ಪ್ರಗತಿಪರರು ಮತ್ತು ದಲಿತರು ದಲಿತರ ಕುರಿತು ಬರೆದಿದ್ದು ದಲಿತ ಸಾಹಿತ್ಯವಾಗುತ್ತದೆ.

ದಲಿತ ಸಾಹಿತ್ಯ: ದಲಿತರು, ದಲಿತೇತರರು ದಲಿತ ಪ್ರಜ್ಞೆಯಿಂದ ದಲಿತರ ಕುರಿತು ಸೃಷ್ಟಿಸಿದ ಸಾಹಿತ್ಯವೇ ದಲಿತ ಸಾಹಿತ್ಯ. ಇದರಲ್ಲಿ ದಲಿತೀಯ ಹಾಗೂ ದಲಿತೇಯ ಮತ್ತು ಅಂಶಿಕ ಸಾಹಿತ್ಯವನ್ನು ಒಳಗೊಂಡಿರುತ್ತದೆ.

ದಲಿತೀಯ ಸಾಹಿತ್ಯ: ದಲಿತರು ದಲಿತ ಪ್ರಜ್ಞೆಯಿಂದ ದಲಿತತ್ವದ ಕುರಿತು ಬರೆದ ಸಾಹಿತ್ಯ ದಲಿತೀಯ ಸಾಹಿತ್ಯವಾಗುತ್ತದೆ.

ದಲಿತೇಯ ಸಾಹಿತ್ಯ: ಪ್ರಗತಿಪರ ದಲಿತೇತರರು ದಲಿತ ಪ್ರಜ್ಞೆಯಿಂದ ದಲಿತರವನ್ನು ಕುರಿತು ಬರೆದ ಸಾಹಿತ್ಯವೇ ದಲಿತೇಯ(ಅದಲಿತೀಯ) ಸಾಹಿತ್ಯವಾಗುತ್ತದೆ.

ಅಂಶಿಕ ದಲಿತ ಸಾಹಿತ್ಯ: ದಲಿತರು ದಲಿತೇತರರು ತಮ್ಮ ಸೃಜನ ಕೃತಿಗಳಲ್ಲಿ ಆಂಶಿಕವಾಗಿ ವ್ಯಕ್ತಪಡಿಸಿದ ವಿಚಾರವನ್ನು ದಲಿತ ಸಾಹಿತ್ಯ ಎಂದು ಕನ್ನಡ ಸಾಹಿತ್ಯಕ್ಕೆ ಅನ್ವಯಿಸಿ ಕರೆಯಲಾಗಿದೆ. ದಲಿತರೇ ಬರೆದದ್ದು ದಲಿತ ಸಾಹಿತ್ಯವಾಗುತ್ತದೆ ಎಂದು ನಂಬಿ ಹೊರಟಿದ್ದೇಯಾದರೆ ಸಾಹಿತ್ಯದಲ್ಲಿ ಮತ್ತೊಂದು ಅಸ್ಪೃಶ್ಯರ ಕೇರಿಯನ್ನು ನಿರ್ಮಾಣ ಮಾಡಿದಂತಾಗುತ್ತದೆ. ಆಗ ದಲಿತ ಸಾಹಿತ್ಯ ಒಂದೇ ವಾರ್ಡಿನ ರೋಗಿಗಳು ನರಳಿದ ದನಿಯಾಗುತ್ತದೆ, ದಲಿತರು ಊರ ಹೊರಗಿದ್ದು ಬದುಕಿದ್ದಾರೆ ಆದರೆ ಊರಿನವರ ಸಂಬಂಧ ಕಳೆದುಕೊಂಡು ಬದುಕಿಲ್ಲ, ಎರಡು ಕೈಗಳು ಸೇರಿದಾಗಲೇ ಚಪ್ಪಾಳೆ–ಧ್ವನಿ. ಆದ್ದರಿಂದ ದಲಿತರು,ದಲಿತೇತರರು ದಲಿತ ಪ್ರಜ್ಞೆಯಿಂದ ದಲಿತರ ಕುರಿತು ಬರೆದದ್ದು ದಲಿತ ಸಾಹಿತ್ಯವಾಗುತ್ತದೆಂದು ಒಪ್ಪಿಕೊಳ್ಳಬೇಕಾಗಿ, ಈವರೆಗೆ ದಲಿತ ಸಾಹಿತ್ಯ ಕುರಿತು ವ್ಯಾಖ್ಯಾನ ಮಾಡಿದವರೆಲ್ಲ ದಲಿತೇತರರೇ ಎನ್ನುವುದನ್ನು ಲಕ್ಷಿಸಬೇಕು.

ದಲಿತ ಬಂಡಾಯ ಸಾಹಿತ್ಯಕ್ಕೆ ಒದಗಿದ ಪ್ರಮುಖ ಪ್ರೇರಣೆ, ಪ್ರಭಾವಗಳು

ಅರವತ್ತರ ದಶಕದ ಅಂತ್ಯ ಮತ್ತು ಎಪ್ಪತ್ತರ ದಶಕದ ಆರಂಭಕಾಲ ಸಾಂಸ್ಕೃತಿಕವಾಗಿ ತಲ್ಲಣಗೊಂಡ ಕಾಲ, ಯಾವುದು ನಿಶ್ಚಿತ ನೆಲೆಯಿಲ್ಲದೆ ಕ್ಷಣದಿಂದ ಕ್ಷಣಕ್ಕೆ ನೀರಮೇಲಿನ ಮೂಡುವ ಮುಳುಗುವ ವೈಚಾರಿಕ ಸಂಘರ್ಷಕ್ಕೆ ನಾಂದಿ ಹಾಡಿದ ಕಾಲ. ದಲಿತ ಯುಗದ ದಲಿತೋದಯದ ಕಾಲದವಿಲ್ಲದ ಕಾಲದಲ್ಲಿ ಕಾಣಿಸಿಕೊಂಡದ್ದು ದಲಿತ ಎಂಬ ಪದ. ಈ ಪದ ಮಹಾರಾಷ್ಟ್ರದಿಂದಲೇ ವಲಸೆ ಬಂದಂತಿದೆ. ಕನ್ನಡ ಸಾಹಿತ್ಯದಲ್ಲಿ ಈ ಪದವನ್ನು ಅಧಿಕೃತವಾಗಿ ಬಳಸಲು ಆರಂಭವಾದದ್ದು 1972 ರಲ್ಲಿ.

1969 ರಲ್ಲಿ ಡಾ ಅಂಬೇಡ್ಕರ್ ಜಯಂತಿಯಂದು ಹಾವನೂರು ಆಯೋಗದ ವರದಿಯನ್ನು ಜಾರಿಯಲ್ಲಿ ತರಬೇಕೆಂದು ದಲಿತ ರಾಜಕೀಯ ನಾಯಕರು ಹೋರಾಟ ಆರಂಭಿಸಿದರು ಈ ಸಂದರ್ಭದಲ್ಲಿ ಬಸವಲಿಂಗಪ್ಪನವರು ನೇತೃತ್ವವನ್ನು ವಹಿಸಿದ್ದರು. 1973 ರಲ್ಲಿ ಮಲಹೊರುವ ಪದ್ಧತಿಯ ಕುರಿತು ಚರ್ಚೆ ಆರಂಭವಾಯಿತು. ಇಂಥವೆಲ್ಲ ಪ್ರಸಂಗಗಳು ದಲಿತರಲ್ಲಿ ದಲಿತಪ್ರಜ್ಞೆ ಜಾಗೃತಿಯನ್ನು ಹೆಚ್ಚಿಸಿದವು, ತುರ್ತುಪರಿಸ್ಥಿತಿಯ ಸಂದರ್ಭಗಳು ಪ್ರತ್ಯಕ್ಷವಾಗಿ ಪ್ರೇರಣೆಯನ್ನಿತ್ತವು.

ಸಾಮಾಜಿಕವಾಗಿ ದಲಿತರು ಒಗ್ಗೂಡಿ ಹೋರಾಡುವ ಮನೋಭಾವವನ್ನು ಹುಟ್ಟುಹಾಕಿದ ಕೇಂದ್ರ ಘಟನೆಯೆಂದರೆ 1973 ರಲ್ಲಿ ನಡೆದ 'ಬೂಸಾ ಪ್ರಕರಣ' ಬಸಲಿಂಗಪ್ಪನವರು ಇಂಜಿನಿಯರಿಂಗ್ ಕಾಲೇಜಿನ ಸಮಾರಂಭವೊಂದರಲ್ಲಿ ದಲಿತರನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಾ ಕನ್ನಡ ಸಾಹಿತ್ಯದಲ್ಲಿ ಬಹುಪಾಲು ಬೂಸಾ ಇದೆ ಎಂದು ಹೇಳಿದ್ದರ ಪರಿಣಾಮವಾಗಿ ದೊಡ್ಡ ಕೋಲಾಹಲವೇ ಉಂಟಾಯಿತು. ದಲಿತ ಮತ್ತು ಮೇಲ್ಜಾತಿಯವರ ನಡುವೆ ನಡೆದು ಕೊನೆಗೆ ಬಸಲಿಂಗಪ್ಪನವರು ತಮ್ಮ ಮಂತ್ರಿ ಪದವಿಗೆ

ರಾಜೀನಾಮೆ ನೀಡಬೇಕಾಯಿತು. ಈ ಸಂದರ್ಭದಲ್ಲಿ ಬ್ರಾಹ್ಮಣ ಪ್ರಜ್ಞೆ, ಶೂದ್ರ ಪ್ರಜ್ಞೆ, ದಲಿತಪ್ರಜ್ಞೆ ಎಂಬ ಸಾಮಾಜಿಕ ಹೊಯ್ದಾಟ ಕಾಣಿಸಿಕೊಂಡಿತು. ಯಾರು ಯಾರನ್ನು ಸೂಚಿಸುತ್ತಿದ್ದಾರೆ ಎನ್ನುವ ಕುರಿತು ದೊಡ್ಡದಾಗಿ ಚರ್ಚೆಗಳು ನಡೆದವು 1974ರಲ್ಲಿ ದಲಿತ ಸಂಘರ್ಷ ಸಮಿತಿ ತಲೆಯೆತ್ತಿ ಮುಂದೆ ಕರ್ನಾಟಕ ದಲಿತ ಸಂಘರ್ಷ ಸಮಿತಿ ಆಗಿ ಬೆಳೆಯಿತು. ನಂತರ 1975ರಲ್ಲಿ ದಲಿತ ಬರಹಗಾರರ ಯುವ ಸಂಘಟನೆ ಕಾಣಿಸಿಕೊಂಡಿತು. ಈ ಸಂಘಟನೆ 1976ರಲ್ಲಿ ಭದ್ರಾವತಿ ಸಮ್ಮೇಳನವೊಂದರಲ್ಲಿ ಮಾಡಿತು. ಪ್ರಜ್ಞಾವಂತ ದಲಿತ ಬರಹಗಾರರ ಸಂಖ್ಯೆ ಕೈಗಳಮೇಲೆ ಎನಿಸುವಷ್ಟು ಹೀಗಾಗಿ ಇವರು ಪ್ರಗತಿಪರ ನಡೆಸುವ ಸಾಹಿತ್ಯ ಸಮ್ಮೇಳನಗಳಲ್ಲಿ ಸಮುದಾಯಗಳಲ್ಲಿ ರೈತ ಬರಗಾಲ ಜಾಥಾದಲ್ಲಿ ತಮ್ಮನ್ನು ಅಧಿಕೃತವಾಗಿ ತೊಡಗಿಸಿಕೊಂಡರು.

ನವ್ಯ ಪಂಥದಿಂದ ಬಿಡಿಸಿಕೊಂಡು ಬಂದ ಲೋಹಿಯಾವಾದದ ಪ್ರತಿಪಾದಕರು ಶೂದ್ರತ್ವದ ನೆಲೆಯಿಂದ ತಲೆಯೆತ್ತಿದರೂ ಲೋಹಿಯಾವಾದದ ಪ್ರಭಾವ ಕನ್ನಡ ಸಾಹಿತ್ಯದಲ್ಲಿ ಹೆಚ್ಚು ಕಾಲ ಉಳಿಯಲಿಲ್ಲ. ಲೋಹಿಯಾವಾದಿ ಬರಹಗಾರರು ಸಂಘಟನಾತ್ಮಕ ಶಕ್ತಿಗಳಿಂದ ದೂರವುಳಿದರು ತಮ್ಮತನವನ್ನು ಕಾಯ್ದುಕೊಳ್ಳಲು ಹವಣಿಸಿದರು ಹೀಗಾಗಿ ದಲಿತ ಬಂಡಾಯದ ಮೇಲೆ ಲೋಹಿಯಾವಾದದ ಅಧಿಕೃತ ಪ್ರಭಾವ ಕೊನೆಯವರೆಗೆ ಉಳಿಯಲಿಲ್ಲ ಆರಂಭದಲ್ಲಿ ಕಾಣಿಸಿಕೊಂಡರು ನಂತರ ಕಾಣೆಯಾಯಿತು. ದಲಿತರು ಅಧಿಕೃತವಾಗಿ ಅಂಬೇಡ್ಕರವಾದವನ್ನು ಇಲ್ಲಿನ ಸಮಸ್ಯೆಗಳಿಗೆ ಉತ್ತರ ಅಂಬೇಡ್ಕರವಾದದಲ್ಲಿದೆ ಎಂದು ಮನಗಂಡರು ದಲಿತೇತರರು ಮಾರ್ಕ್ಸ್ ವಾದವನ್ನು ಮುನ್ನಡೆದರು.

ಜಮೀನ್ದಾರಿ ಜನ ಲೋಹಿಯಾವಾದವನ್ನು ನೆಚ್ಚಿ ನಡೆಯುವುದು ಅಚ್ಚರಿಯ ತರುವ ಸಂಗತಿ ಏನಿಲ್ಲ ಲೋಹಿಯವಾದಕ್ಕಿಂತ ದಲಿತರಿಗೆ ಗಾಂಧಿವಾದ ಪರೋಕ್ಷವಾಗಿ ಶಕ್ತಿಯಾಗಿ ಕೆಲಸ ಮಾಡಿದೆ ಎನ್ನಬಹುದು. ದಲಿತ ಸಾಹಿತ್ಯಕ್ಕೆ ಹೊಸ ಆಯಾಮಗಳನ್ನು ಒದಗಿಸುವಲ್ಲಿ ಕುದುರೆಮೋತಿ ಪ್ರಕರಣ, ಬೆಲ್ಚಿ ಪ್ರಕರಣ, ಕಾರಣ ಚಂಡು ಪ್ರಕರಣ, ಮೀಸಲಾತಿ ವಿರೋಧಿ ಪ್ರಕರಣ ಮತಾಂತರ ಪ್ರಸಂಗಗಳು ಹೋರಾಟದ ಪ್ರಸಂಗಗಳು, ಆಕ್ರಮಣದ ಪ್ರಸಂಗಗಳು, ವೆಂಕಟಸ್ವಾಮಿ ಆಯೋಗದ ವರದಿ ಗಾಂಧಿ ಚಲನಚಿತ್ರ ಹೋರಾಟ ಚುನಾವಣಾ ಬಹಿಷ್ಕಾರ ಇಂಥ ಹಲವಾರು ಸಂದರ್ಭಗಳು ಚಳುವಳಿಯನ್ನು ಬಲಪಡಿಸಿವೆ.

ದಲಿತ ಬಂಡಾಯ ಸಾಹಿತ್ಯ ಇಂದು-ನಿನ್ನೆಯದಲ್ಲ ಪಂಪನಿಂದ ಕುವೆಂಪು ರವರೆಗೂ ಅದು ಬೆಳೆದು ಬಂದಿರುವುದು ಹಿಂದಿನ ಹಲವಾರು ಕಾವ್ಯಗಳಲ್ಲಿ ಈ ಸಾಹಿತ್ಯದ ಪರಂಪರೆಯನ್ನು ಕಾಣಬಹುದು. ಉದಾಹರಣೆಗೆ- ಪಂಪಭಾರತದ ನೆನೆಯದಿರಣ್ಣ ಭಾರತದೊಳ್ ಪೆರರಾ ರುಮನ್ ಒಂದೇ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ, ಕರ್ಣರಸಾಯನಮಲ್ತೆ ಭಾರತಂ ಹಾಗೂ ಕುಲಂ ಕುಲಮಲ್ತು ಗುಣಂ ಕುಲಂ ಅಭಿಮಾನ ಒಂದೇ ಕುಲ ಎಂಬ ನುಡಿಗಳು ಗದಾಯುದ್ಧದ ನೆಲಕಿರಿವೆನೆಂದು ಬಗೆದಿರೆ ಛಲಕಿರಿವೆಂ ಕೆಳಗಿರುವ ಮಾತು, ಪಂಚತಂತ್ರದ ಕಥೆಗಳು ಮೇಲ್ನೋಟಕ್ಕೆ ಪ್ರಾಣಿಯ ಕಥೆಗಳು ಎನಿಸಿದರು ಅಲ್ಲಿ ಮಾನವನ ಸಮಾಜದ ಸಂಘರ್ಷವಿದೆ. ರಾಜಾಶ್ರಯದಲ್ಲಿ ರಾಜಪ್ರಭುತ್ವವನ್ನು ದಿಕ್ಕರಿಸಿದ ಕೆಚ್ಚಿದೆ. ಹಾಗೆಯೇ ವಚನ ಸಾಹಿತ್ಯದಲ್ಲಿ ಹಲವಾರು ವಚನಗಳಲ್ಲಿ ಜಾತಿ ಪದ್ಧತಿ ಖಂಡನೆ ವೇದ ಆಗಮಗಳ ಧಿಕ್ಕರಿಸಿದ್ದ ಸ್ತ್ರೀ ಸಮಾನತೆ ಮುಂತಾದವುಗಳ ಅನಾವರಣವಿದೆ. ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ, ಮಡಿ ಮಡಿ ಎಂದು ಮಾರುದ್ದ ಹಾರುತಿ ಮಡಿಯಲ್ಲಿ ಮೊದಲಾದ ದಾಸವಾಣಿಗಳು, ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ ಜಾತಿ ವಿಜಾತಿ ಎನಬೇಡ ದೇವನೊಲಿದಾತನೆ ಜಾತ ಎಂಬ ಸರ್ವಜ್ಞನ ತ್ರಿಪದಿಗಳಲ್ಲಿ ಜಾತಿವ್ಯವಸ್ಥೆಗೆ ಧಿಕ್ಕಾರವಿದೆ. ಆಧುನಿಕ ಸಾಹಿತ್ಯದಲ್ಲಿ ಬೇಂದ್ರೆಯವರ 'ಪುಟ್ಟ ವಿಧವೆ' ಕುವೆಂಪುರವರ 'ಕಾನೂನು ಸುಬ್ಬಮ್ಮ ಹೆಗ್ಗಡತಿ' 'ಮಲೆಗಳಲ್ಲಿ ಮದುಮಗಳು', ಕಟ್ಟಿಮನಿಯವರ 'ಜರತಾರಿ ಜಗದ್ಗುರು' 'ಜ್ವಾಲಾಮುಖಿಯ ಮೇಲೆ' ಹೀಗೆ ಹಲವಾರು ಕೃತಿಗಳಲ್ಲಿ ದಲಿತ ಬಂಡಾಯ ಸಾಹಿತ್ಯದ ನಮಗೆ ಕಾಣಿಸುತ್ತವೆ.

ನಮ್ಮ ನೆಲದ ಮಣ್ಣು ಆ ಸತ್ವವನ್ನು ಸ್ವೀಕರಿಸುವ ವಾತಾವರಣವೊಂದು ನಿರ್ಮಾಣವಾಗಿರುವಾಗಿರಬೇಕಾಗುತ್ತದೆ. ಅದು ತನ್ನ ಪರಿಸರ ಗುಣದಿಂದಲೇ ಸ್ವೀಕರಿಸಬೇಕಾಗಿರುತ್ತದೆ. ಬಿಳಿಮಲೆಯವರು, ಈ ಅರ್ಥದಲ್ಲಿ "ಸಾಹಿತ್ಯದ ಆಂತರಿಕ ಅರ್ಥವಲಯಕ್ಕೂ, ಸಾಮಾಜಿಕ ಬಹಿರ ಪ್ರಪಂಚಕ್ಕೂ ಒಂದು ವಿಧದ ಸಂಬಂಧ ಏರ್ಪಟ್ಟಿರುತ್ತದೆ " ಎಂದು ಗುರುತಿಸಿ ಸಾಹಿತ್ಯೇತರ ಮತ್ತು ಸಾಹಿತ್ಯ ಪ್ರೇರಣೆಗಳೆಂದು ಬಿಳಿಮಲೆಯವರು ಗುರುತಿಸುತ್ತಾರೆ.

ಸಾಹಿತ್ಯಪ್ರೇರಣೆಗಳು

ಸಾಹಿತ್ಯೇತರ ಪ್ರೇರಣೆಗಳಲ್ಲಿ ಮಹಾರಾಷ್ಟ್ರದ ದಲಿತ ಪಂಥಗಳ ಸಾಹಿತ್ಯ, ತೆಲುಗಿನ ದಿಗಂಬರ ಸಾಹಿತ್ಯ, ಆಫ್ರಿಕಾದ ಕಪ್ಪು ಸಾಹಿತ್ಯದ ಪ್ರಭಾವ ಇದರ ಜೊತೆಗೆ ರಾಜಕೀಯ ಸಿದ್ಧಾಂತಗಳಾದ ಮಾರ್ಕ್ಸ್‌ವಾದ, ಲೋಹಿಯಾವಾದ, ಅಂಬೇಡ್ಕರ್ ವಾದಗಳು, ಮತ್ತು ಅನೇಕ ಚಳುವಳಿಗಳು ಪ್ರೇರಣೆ ಒದಗಿಸಿದವು.

ಮಾರ್ಕ್ಸ್‌ವಾದ

ಮಾರ್ಕ್ಸ್‌ವಾದ ಸಮಾಜದ ಆರ್ಥಿಕ ಸಿದ್ಧಾಂತ ಹೆಚ್ಚಿನ ಮಹತ್ವ ನೀಡಿ ಬಂಡಾಯ ದಲಿತ ಚಳುವಳಿ ಆರ್ಥಿಕವಾಗಿ ಹಿಂದುಳಿದವರೆಲ್ಲರೂ ಸಮಾನರು ಎಂದು ಭಾವಿಸುತ್ತದೆ. ಇಲ್ಲಿ ಆರ್ಥಿಕ ಪರಿಸ್ಥಿತಿ ಮುಖ್ಯವೇ ಹೊರತು ಅವರ ಜಾತಿ ಮುಖ್ಯವಾಗುವುದಿಲ್ಲ. ಸಾಹಿತಿಯೂ ಹುಟ್ಟಿದ ಹಿನ್ನೆಲೆ ಹಾಗೂ ಅವನ ಕೃತಿಯ ಹುಟ್ಟು ಸಮಾಜದ ಒಟ್ಟು ಉತ್ಪಾದನೆ ವ್ಯವಸ್ಥೆಯ ಒಂದು ಭಾಗವಾಗಿರುತ್ತದೆ ಎಂದು ಭಾವಿಸಲಾಗುತ್ತದೆ. ಆದ್ದರಿಂದ ಒಬ್ಬ ಕವಿ ಮತ್ತು ಕೃತಿ ಸಮಾಜದೊಂದಿಗೆ ನಿಕಟ ಸಂಬಂಧವನ್ನು ಹೊಂದಿರಬೇಕಾಗುತ್ತದೆ. ಇಲ್ಲಿ ಜಾತಿ ಪ್ರಶ್ನೆಗಳಿಗಿಂತ ಸಮಾಜದಲ್ಲಿಯೇ ವ್ಯಕ್ತಿಯ ಆರ್ಥಿಕ ಸ್ಥಿತಿಗೆ ಮುಖ್ಯ ಎಂದು ನಂಬುತ್ತಾರೆ.

ಲೋಹಿಯಾವಾದ

ವಿದ್ಯಾವಂತ ಭಾರತೀಯ ಬದುಕನ್ನು ಆಕರ್ಷಿಸಿದ ಮಾರ್ಕ್ಸ್‌ವಾದಕ್ಕೆ ಪರ್ಯಾಯವಾಗಿ ಗಾಂಧಿವಾದದಿಂದ ಮೂಡಿಬಂದದ್ದು ಲೋಹಿಯಾವಾದ . ದೇಶಿಯ ಸಂಸ್ಕೃತಿಗಳ ಮಹತ್ವವನ್ನು ಎತ್ತಿ ಹಿಡಿಯುತ್ತ ಪ್ರಾದೇಶಿಕ ಸಂವೇದನೆಗಳಿಗೆ ಇಂಬು ಕೊಟ್ಟಿತು. ಬಂಡಾಯ ದಲಿತ ಬರಹಗಾರರು ಕಾರಣವಾಗಿದ್ದಾರೆ. ಬಂಡಾಯ ದಲಿತ ಚಳುವಳಿಯ ಮಾರ್ಕ್ಸವಾದಿ ಬರಹಗಾರರು ಲೋಹಿಯಾವಾ ಗಳನ್ನು ಸದಾ ಗುಮಾನಿಯಿಂದಲೇ ಕಾಣುತ್ತಾರೆ. ಲೋಹಿಯಾವಾದಿಗಳು ಮಾರ್ಕ್ಸ್ ವಾದಿಗಳನ್ನು ಒಳಗೊಳಗೆ ದ್ವೇಷಿಸುತ್ತಾರೆ ಎಂದಿರುವರು ಪುರುಷೋತ್ತಮ ಬಿಳಿಮಲೆಯವರು. (ಬಂಡಾಯ–ದಲಿತ ಸಾಹಿತ್ಯ, ಪುರುಷೋತ್ತಮ ಬಿಳಿಮಲೆ ಪು–24) ಇದು ದೇಶಿ ಸಂಪತ್ತು ಭಾಷೆ ಸಂಸ್ಕೃತಿಗಳ ಮಹತ್ವವನ್ನು ಕಂಡುಕೊಳ್ಳಲು ಕಾರಣವಾಯಿತು.

ಅಂಬೇಡ್ಕರ್ ವಾದ

ದಲಿತ ಸಾಹಿತ್ಯ ಚಳುವಳಿಗೆ ಮುಖ್ಯವಾಗಿ ಪ್ರೇರಣೆಯಾದದ್ದು ಅಂಬೇಡ್ಕರ್‌ವಾದ. ಅಂಬೇಡ್ಕರ್ ದಲಿತರ ಸ್ವಾಭಿಮಾನದ ಸಂಕೇತ ದಲಿತರು ವಿದ್ಯಾವಂತರಾಗಬೇಕು, ಬಗ್ಗೆ ಆರ್ಥಿಕವಾಗಿ ಮುಂದುವರೆಯಬೇಕು,ಸಮಾಜದಲ್ಲಿ ರಾಜಕೀಯವಾಗಿ ಅಧಿಕಾರ ಉಳ್ಳವರಾಗಿರಬೇಕು. ತಮ್ಮನ್ನು ತಾವು ಬದಲಾಯಿಸಿಕೊಳ್ಳಲು ಪ್ರಯತ್ನಿಸಬೇಕು ಎಂದು ಹೇಳುತ್ತದೆ. ಕಾರಣ ಅಂಬೇಡ್ಕರ್ ಅವರ ಸ್ಫೂರ್ತಿ ಪ್ರಭಾವಗಳು ಅಪರಿಮಿತವಾದವು. ಅಂಬೇಡ್ಕರ ಬರಹದಿಂದ ಮಹಾರಾಷ್ಟ್ರದಲ್ಲಿ ಜನಪ್ರೀಯವಾದ ದಲಿತ ಸಾಹಿತ್ಯ ಕನ್ನಡಕವಿಗಳಲ್ಲಿ ಗಾಢ ಪ್ರಭಾವಬೀರಿತು.

ಇತರ ಚಳುವಳಿಗಳು

ಇಂದಿರಾಗಾಂಧಿಯವರು ಘೋಷಿಸಿದ ತುರ್ತುಪರಿಸ್ಥಿತಿ, ಬಸವಲಿಂಗಪ್ಪನವರ ಬೂಸಾ ಪ್ರಕರಣ, ವಿದ್ಯಾರ್ಥಿಗಳ ಎಕ್ಸೋ 70ರ ಚಳುವಳಿ, ಜಾತಿ ವಿನಾಶ ಸಮ್ಮೇಳನ, ಬರಹಗಾರರ ಮತ್ತು ಕಲಾವಿದರ ಒಕ್ಕೂಟ ನಡೆಸಿದ ಸಮ್ಮೇಳನ ಶೂದ್ರ, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಚಳುವಳಿಗಳು, ಬಂಡಾಯ ಚಳುವಳಿ, ಇತ್ಯಾದಿ

ಪತ್ರಿಕೆಗಳು

ಚಂಪಾ ಅವರ 'ಸಂಕ್ರಮಣ' 'ಶೂದ್ರ' ಆರ್ಜಿ ಹಳ್ಳಿ ನಾಗರಾಜ್ ಅವರ 'ಅನ್ವೇಷಣೆ' ರಘುರಾಮ ಶೆಟ್ಟಿ ಅವರ 'ಮುಂಗಾರು' ಲಂಕೇಶ್ ಪತ್ರಿಕೆ, ಪಂಚಮ, ಹೊಸದಿಕ್ಕು, ಕೆಂಬಾವುಟ, ಐಕ್ಯರಂಗ, ಮುಂತಾದವುಗಳು.

ಸಾಹಿತ್ಯಿಕ ಪ್ರಭಾವಗಳು

ತೆಲುಗಿನ ದಿಗಂಬರ ಕಾವ್ಯ ಮರಾಠಿಯ ದಲಿತ ಚಳುವಳಿ ಹೀಗೆ ನೆರೆಯ ರಾಜ್ಯದ ಚಿಂತನೆಗಳಿಂದ ಆಕರ್ಷಕವಾದ ಅನ್ಯಭಾಷೆಯ ದಲಿತ–ಬಂಡಾಯ ಹೋರಾಟಗಳು ಕನ್ನಡ ಮೇಲೆ ಪ್ರಭಾವ ಬೀರಿದವು. ಸಿದ್ಧಲಿಂಗಯ್ಯನವರ 'ಹೊಲೆ ಮಾದಿಗರ ಹಾಡು" 'ಇಕ್ಕರ್ಲಾ ಒದಿರ್ಲಾ ಸ್ಫೋಟಗೊಂಡ ಕವನ "ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು"ಅರವಿಂದ ಮಾಲಗತ್ತಿ, ಎಲ್, ಕೆಬಿ ಸಿದ್ದಯ್ಯ, ಎಂ ಗೋವಿಂದಯ್ಯ, ಮನಜ, ಚೆನ್ನಣ್ಣ ವಾಲೀಕಾರ, ಬಿ ಟಿ ಲಲಿತಾ ನಾಯಕ್, ಮಾಲತಿ ಪಟ್ಟಣಶೆಟ್ಟಿ, ವಿಜಯಾ ದಬ್ಬೆ, ಪ್ರತಿಭಾ, ಶಶಿಕಲಾ ವೀರಯ್ಯಸ್ವಾಮಿ ಮುಂತಾದವರು ದಲಿತ ಬಂಡಾಯ ಸಂವೇದನೆಗಳನ್ನು ದಾಖಲಿಸಿದ್ದಾರೆ.

ದಲಿತ ಬಂಡಾಯ ಸಾಹಿತ್ಯದ ಲಕ್ಷಣಗಳು

1. ಪ್ರತಿಭಟನಾತ್ಮಕವಾದ ಶೈಲಿ, ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರ.

2. ಶೋಷಣೆಯ ಸಮರ್ಥಿಸುವ ಯಜಮಾನ ಸಂಸ್ಕೃತಿಯ ವಿರುದ್ಧ ಹೋರಾಟ, ತಮ್ಮ ಹಕ್ಕುಗಳಿಗಾಗಿ ಸಾಹಿತ್ಯರಚನೆ.

3. ಶೋಷಿತ ಜನತೆಯ ಹೋರಾಟಕ್ಕೆ ಬೆಂಬಲ ಸೂಚಿಸುವುದು. ದಲಿತರ ಬಡವರ ಶೋಷಿತರ ಧ್ವನಿಯಾಗಿದೆ.

4. ಸರಳವಾದ ಭಾಷೆ ಬಳಕೆ, ಆಡುಮಾತಿನ ಲಯ, ದೀನದಲಿತರ ಅಜ್ಞಾನ ಕೀಳರಿಮೆಗಳು ಚಿತ್ರಣ

5. ಪಟ್ಟಭದ್ರ ಹಿತಾಸಕ್ತಿಗಳಿಂದ ಕಪಿಮುಷ್ಟಿಯಿಂದ ಹೊರಬರಲು ಸಾಹಿತ್ಯ ರಚನೆ.

6. ಮಾನವೀಯ ಮೌಲ್ಯಗಳಿಗೆ ಒತ್ತು ನೀಡುವುದು. ದಲಿತರನ್ನು ಅಕ್ಷರಸ್ಥರನ್ನಾಗಿಸುವುದು.

7. ಸಮಾಜದ ಮೌಢ್ಯ ಸಂಪ್ರದಾಯಗಳ ಖಂಡನೆ, ಪ್ರಜಾಪ್ರಭುತ್ವದ ರಕ್ಷಣೆಗೆ ವಿಸ್ತರಣೆಗೆ ಒತ್ತು ಕೊಡುವುದು.

8. ದಲಿತರ ಸಮಸ್ಯೆಗಳು ತಲಸ್ಪರ್ಶಿ ವಿಶ್ಲೇಷಣೆ ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವುದು.

ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯಗಳ ವ್ಯತ್ಯಾಸ

ದಲಿತ ಸಾಹಿತ್ಯ ಮತ್ತು ಬಂಡಾಯ ಸಾಹಿತ್ಯಗಳೆರಡು ಒಂದೇ ಎಂದು ಭಾವಿಸಿದ್ದಾರೆ ಆದರೆ ದಲಿತ ಸಾಹಿತ್ಯವೇ ಬೇರೆ ಬಂಡಾಯ ಸಾಹಿತ್ಯವೇ ಬೇರೆ, ಎರಡು ಸಾಹಿತ್ಯಗಳ ಮೂಲ ಆಶಯ ಬಂಡಾಯವೇ ಆದರೂ ವ್ಯತ್ಯಾಸಗಳನ್ನು ಕಾಣುತ್ತೇವೆ.

ದಲಿತ ಸಾಹಿತ್ಯವೆಂದರೆ ತುಳಿತಕ್ಕೊಳಗಾದ ಶತಶತಮಾನಗಳಿಂದ ಶೋಷಣೆಗೊಳಗಾದ ದಲಿತ ಸಾಹಿತ್ಯ,, ಬಂಡಾಯ ಸಾಹಿತ್ಯವೆಂದರೆ ಸಮಾಜದ ಅನ್ಯಾಯದ ವಿರುದ್ಧದ ಎಲ್ಲ ಜನರ ಎಲ್ಲ ವರ್ಗದವರ ಪ್ರತಿಭಟನಾ ಸಾಹಿತ್ಯ, ಬಂಡಾಯ ಸಾಹಿತ್ಯದಲ್ಲಿ ದಲಿತರು ಬರಬಹುದು ಸಮಾಜದ ಅನ್ಯಾಯವನ್ನು ಮೇಲ್ವರ್ಗದವರು ಬರಬಹುದು ಒಟ್ಟಾರೆ ಸಮಾಜದ ಎಲ್ಲ ವರ್ಗದ ಜನರ ಪ್ರತಿಭಟನೆ ಬಂಡಾಯ ಸಾಹಿತ್ಯ ಎನಿಸಿಕೊಳ್ಳುತ್ತದೆ. ದಲಿತ ಸಾಹಿತ್ಯ ಕೇವಲ ದಲಿತರ ಪ್ರತಿಭಟನಾ ಸಾಹಿತ್ಯ.(ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಮೀಕ್ಷೆ– ಎಲ್.ಎಸ್. ಕಾಡದೇವರಮಠ ವಿದ್ಯಾನಿಧಿ ಪ್ರಕಾಶನ ಗದಗ 2004)

ಕನ್ನಡ ಸಾಹಿತ್ಯದಲ್ಲಿ ಪಂಪ ಬಸವಣ್ಣ ಹರಿಹರ ರಾಘವಾಂಕ ವಚನಕಾರರು ಕೀರ್ತನಕಾರರು ಒಂದರ್ಥದಲ್ಲಿ ಬಂದವರೇ ಬುದ್ಧ ಸ್ವಾಮಿ ವಿವೇಕಾನಂದರು, ನಾರಾಯಣ ಗುರು ಮೊದಲಾದವರೆಲ್ಲ ಪ್ರಗತಿಶೀಲ ಮನೋಭಾವದ ಬಂಡಾಯವಾದಿಗಳು.

ಪಂಪನಿಂದ ಇಲ್ಲಿಯವರೆಗಿನ ಸಾಹಿತ್ಯದಲ್ಲಿ ವ್ಯಕ್ತವಾದ ಪ್ರತಿಭಟನೆ ಮಾನವೀಯ ಮೌಲ್ಯಗಳು ಪ್ರಗತಿಪರ ಅಂಶಗಳು ಬಂಡಾಯ ಪರಂಪರೆ ಎಂದು ಗುರುತಿಸಲಾಗಿದೆ. ದಲಿತ ಸಾಹಿತ್ಯದ ಮುಂಚೂಣಿಯಲ್ಲಿ ಸಿದ್ಧಲಿಂಗಯ್ಯರವನ್ನು ಗುರುತಿಸಬಹುದು. ಬಂಡಾಯ ಸಾಹಿತ್ಯದ ಮುಂಚೂಣಿಯಲ್ಲಿ ಬರಗೂರು ರಾಮಚಂದ್ರಪ್ಪನವರನ್ನು ಗುರುತಿಸಬಹುದು.

ಪುರುಷೋತ್ತಮ ಬಿಳಿಮಲೆಯವರು–"ಕನ್ನಡದ ಬಂಡಾಯ ದಲಿತ ಸಾಹಿತ್ಯದಲ್ಲಿ ಒಂದು ಬಗೆಯ ಪ್ರತಿಭಟನೆ ಬಹಳ ಖಚಿತವಾಗಿ ಕಾಣಿಸಿಕೊಂಡಿದೆ. ಹಿಂದಿನ ಸಾಹಿತ್ಯದಲ್ಲಿ ಪ್ರತಿಭಟನೆ ಒಂದು ಬಿಡಿ ಅಂಶವಾಗಿ ಕಾಣಿಸಿಕೊಂಡಿತ್ತು. ಆದರೆ ಬಂಡಾಯ ದಲಿತ ಸಾಹಿತ್ಯವು ಇಡಿಯಾಗಿಯೇ ಒಂದು ಪ್ರತಿಭಟನೆಯಾಗಿದೆ. ವ್ಯವಸ್ಥೆಯ ಬಗೆಗಿನ ಅಸಮಾನದಿಂದಲೇ ಅದು ಹುಟ್ಟಿದೆ.

ಕಾವ್ಯ

ಸಮಾಜದಲ್ಲಿ ನೊಂದವರ, ತುಳಿತಕ್ಕೆ, ಶೋಷಣೆಗೆ ಒಳಗಾದ ಅಸ್ಪೃಶ್ಯರು, ದೀನದಲಿತರು, ಹಿಂದುಳಿದ ಜನಾಂಗದವರ ನೋವಿನ ದನಿಯಾಯಿತು, ಅಸಮಾನತೆ, ಜಾತೀಯತೆ,, ವರ್ಗ, ವರ್ಣ ಯಾವುದೇ ನೆಲೆಯಲ್ಲಿ ವ್ಯಕ್ತಿ ಅವಕಾಶವಂಚಿತನಾದರೂ ಅವನ ಶೋಷಣೆಗೆ ಪ್ರತಿಭಟಿಸುತ್ತಾ ತಮಗಾದ ಅನ್ಯಾಯಗಳ ವಿರುದ್ಧ ಧ್ವನಿಯಲ್ಲಿ ಅದನ್ನು ದಾಖಲಿಸುವ ಆಸಕ್ತಿ ತೋರಿದವು, 'ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿವ ಪ್ರಾಣಮಿತ್ರ'ಎನ್ನುತ್ತಾ ಕಾವ್ಯದ ಸಾಮಾಜಿಕ ಜವಾಬ್ದಾರಿಯನ್ನು ಹೇಳುತ್ತಲೇ ಅದು ನೊಂದ ಜನರಿಗೆ ಸಾಂತ್ವನ ಹೇಳಬೇಕು, ಸಾಹಿತ್ಯದ ಮಿತಿಗಳನ್ನು ತುಂಬಿಕೊಡಲು ಬಂಡಾಯ–ದಲಿತ ಕಾವ್ಯ ಪ್ರಯತ್ನಿಸುತ್ತದೆ. ಕಾವ್ಯ ತುಂಬಾ ಹರಿತವಾದದ್ದು ಹೌದು, ಹಾಗೆ ಅಸ್ಪೃಶ್ಯರ, ಅಸಹಾಯಕರ, ಬಡವರ, ನೊಂದವರ ನೋವಿಗೆ ಸ್ಪಂದಿಸುವ, ಅದಕ್ಕೆ ಉತ್ತರಗಳನ್ನು ಹುಡುಕಲು ನೆರವು ನೀಡಬೇಕು, ಬಡವರ ಕಣ್ಣೊರೆಸುವ ಗುಣ ಅದಕ್ಕಿರಬೇಕು, ಈ ಚಳುವಳಿಯ ಅಕ್ಷರಸ್ಥ ನೆಲೆಯಿಂದ ಮೂಡಿಬರುವ ಮಾತು, ಭಾವನೆ ನಯಗಾರಿಕೆ, ಸೂಕ್ಷ್ಮತೆಗಳು ಕಾಣಿಸಿಕೊಳ್ಳುವುದಿಲ್ಲ ಈ ಮಟ್ಟದ ಆಕ್ರೋಶ, ಸಿಟ್ಟು, ಕೋಪ ಇವುಗಳ ಸಾಂಸ್ಕೃತಿಕ ತಳಮಳ ಅಡಿಯಿಂದಲೇ ರೂಪುಗೊಂಡವುಗಳು ಆಗಿವೆ.

ಈ ಕಾವ್ಯ ಪ್ರಕಾರ ಸ್ಫೋಟಿಸಿದ್ದು ಸಿದ್ಧಲಿಂಗಯ್ಯನವರ 'ಹೊಲೆಮಾದಿಗರ ಹಾಡು' (1975) ಸಂಕಲನದ ಆರಂಭದಲ್ಲಿ "ಇವನ್ನು ಗಟ್ಟಿಯಾಗಿ,ಲಯಬದ್ಧವಾಗಿ ಹಾಡಿದಾಗ, ಓದಿಕೊಂಡಾಗ ಮಾತ್ರ ನನ್ನ ರಚನೆಯ ಉದ್ದೇಶ ಸ್ಪಷ್ಟವಾಗುತ್ತದೆ" ಬರೆದುಕೊಂಡರು. ನವ್ಯದ ಅಂತರ್ಮುಖಿ ರಚನೆಗಳನ್ನು ತಿರಸ್ಕರಿಸುವ ಹಠವಿದು. ಈ ಹಠದೊಂದಿಗೆ ಹೊಸ ಆಕೃತಿ ಸಿದ್ಧಗೊಳ್ಳುತ್ತಲೆ ಶತಮಾನಗಳಿಂದ

ತುಳಿತಕ್ಕೊಳಗಾದ ದಲಿತರ ನೋವು,ತಳಮಳ,ಸಿಟ್ಟು ದುರಂತ ಮೊದಲಾದವು ಮೊದಲಬಾರಿಗೆ ಸಿಟ್ಟುಕಾರುತ್ತ ಅಕ್ಷರಲೋಕವನ್ನು ಪ್ರವೇಶಿಸಿದವು. ಗಾಂಧೀಜಿ ರಮ್ಯಗೊಳಿಸಿದ್ದ 'ಹರಿಜನ' ಪದ ನಿರಾಕರಣೆಯೊಂದಿಗೆ ಈ ಸಂಕಲನ ಕ್ರಾಂತಿಕಾರಿಯಾಯಿತು.

ದಲಿತರ ದುರಂತಕ್ಕೆ ಕಾರಣವಾಗಿರುವ ವ್ಯವಸ್ಥೆಯವಿರುದ್ಧ ಸಿಟ್ಟು, ಅದನ್ನು ಧ್ವಂಸ ಮಾಡಿಬಿಡಬೇಕೆಂಬ ಅದಮ್ಯ ಉತ್ಸಾಹ, ತನ್ನವರ ಅಜ್ಞಾನ ಮತ್ತು ಹೆಡ್ಡತನಕ್ಕಾಗಿ ನೋವು-ಬೇಸರ, ದಲಿತರನ್ನು ಸಂಘರ್ಷಕ್ಕೆ ಪ್ರಚೋದಿಸುವ ಬಯಕೆ, ಕ್ರಾಂತಿಯ ಬಗ್ಗೆ ಅಚಲವಾದ ನಂಬಿಕೆ –ಇವೆ ಮುಂತಾದವು ಇವರ ಕಾವ್ಯದ ಪ್ರೇರಣೆ ಮತ್ತು ವಸ್ತುವಾದವು.

ಹೊಲೆಮಾದಿಗರ ಹಾಡಿನಲ್ಲಿ – ಇಕ್ರಲಾ ವದೀರ್ಲಾ
ಈ ನನ್ನ ಮಕ್ಕಳ ಚರ್ಮ ಎಬ್ರಲಾ
ದೇವ್ರು ಒಬ್ನೇ ಅಂತಾರೆ
ಓಣಿಗೊಂದೊಂದ ತರಾ ಗುಡಿ ಕಟ್ಟವ್ರೆ . . .
ನನ್ನ ಜನಗಳು ಕವನದಲ್ಲಿ – ಪರಮಾತ್ಮನ ಹೆಸರು ಹೇಳಿ ಪರಮಾನ್ನ ಉಂಡ ಜನಕೆ
ಬೂಟು ಮೆಟ್ಟು ಹೊಲೆದೋರು ನನ್ನ ಜನಗಳು

ಎಂದು ತಪ್ಪು ಮಾಡಿದವರಿಗೆ ಮುಖಕ್ಕೆ ರಾಚುವ ಹಾಗೆ ವ್ಯಕ್ತವಡಿಸಿರುವರು. ಇದು ದಲಿತರಲ್ಲಿ ಸ್ವಾಭಿಮಾನವನ್ನು ಹೆಚ್ಚಿಸಿತು. ನಂತರದ 'ಸಾವಿರಾರು ನದಿಗಳು' ಕವನ ಸಂಕಲನ ಇನ್ನಷ್ಟು ಪ್ರೇರಣೆ ನೀಡಿತು. ಕಪ್ಪು ಕಾಡಿನ ಹಾಡು ಸಂಕಲನದಲ್ಲಿ ಆಕ್ರೋಶ ಆವೇಶಗಳಿಂದ ಪೂರ್ಣಪಾರಾದ ಕವನಗಳು ಮೂಡಿದವು –

ಗುಡಿಸಲಿನಲ್ಲಿ ಅರಳುವ ಗುಲಾಬಿ
ನಕ್ಷತ್ರ ನನ್ನ ಕವನ

ದಲಿತಲೋಕವನ್ನು ಹಸಿಹಸಿ ಯಾಗಿ ಇವರಂತೆ ದಾಖಲಿಸಿದ ಕವಿ ಎಂ.ಗೋವಿಂದಯ್ಯನವರು, ಅವರ 'ಗುದ್ದಲಿಯ ಕಾವು' ಸಾಕ್ಷೀಭೂತವಾಗಿದೆ. ನಂತರ ಇಂದೂಧರ ಹೊನ್ನಾಪುರ, ಚನ್ನಣ್ಣ ವಾಲಿಕಾರರ ಕವನಸಂಕಲನಗಳು 'ಪ್ಯಾಂತರ ಪದ್ಯಗಳು','ಬಂಡೆದ್ದ ದಲಿತರ ಬೀದಿ ಹಾಡುಗಳು', ಮ.ನ.ಜವರಯ್ಯರವರ 'ಕೇಳು ಜಗ ಮಾದಿಗ ಹೊಲೆಯ' ಸಂಕಲನದಲ್ಲಿ ದಲಿತ ಪರ ಗಂಭೀರ ನಿಲುವನ್ನು ಕಾಣಬಹುದು. ಅರವಿಂದ ಮಾಲಗತ್ತಿಯವರ ಸಂಕಲನ 'ಮೂಕನಿಗೆ ಬಾಯಿ ಬಂದಾಗ' ದಲಿತರ ಭಾಷೆ ಸೂರೆಗೊಂಡುದ್ದನ್ನು ಗಮನಿಸಬಹುದು– ಹುಟ್ಟ ಬಾರದ್ರೆಪ್ಪೋ ಹುಟ್ಟ ಬಾರ್ದ

ಏಳೇಳ ಜಲ್ಮದಾಗ ಈ ಭೂಮಿ ಮ್ಯಾಗ
ಹೊಲಿ ಮಾದಿಗ್ರಾಗಿ ಹುಟ್ಟ ಬಾರ್ದ (ಕುತ್ತು)

ಇನ್ನು ಮುಂತಾದವರು ದಲಿತ ಬಂಡಾಯ ಕಾವ್ಯಕ್ಕೆ ಮುನ್ನುಡಿಯಿಟ್ಟರು.

ಕವನ ಸಂಕಲನಗಳು

ಡಾ.ಮುನಿವೆಂಕಟಪ್ಪ – ಕೆಂಡದ ನಡುವೆ, ಸ್ವಾಭಿಮಾನದ ಬೀಡಿಗೆ, ಸತ್ಯಾನಂದ ಪಾತ್ರೋಟ – ಕರಿ ನೆಲದ ಕಲೆಗಳು, ಜಾಜಿಮಲ್ಲಿಗೆ, ನನ್ನ ಕನಸಿನ ಹುಡುಗಿ, ಕಲ್ಲಿಗೂ ಗೊತ್ತಿರುವ ಕಥೆ, ಕರಿಯ ಕಟ್ಟಿದ ಕವನ, ಮ.ನ.ಜವರಯ್ಯ– ಕೇಳು ಜಗ ಮಾದಿಗ–ಹೊಲೆಯ, ಅತ್ತೆ–ಸೊಸೆ ಆತ್ಮಕಥೆ, ಬಂಡಾಯ ಮತ್ತು ಹೆಣ್ಣು, ಗುಲಾಮಿ. ಅರವಿಂದ ಮಾಲಗತ್ತಿ– ಮೂಕನಿಗೆ ಬಾಯಿ ಬಂದಾಗ, ಮೂರನೆಯ ಕಣ್ಣು,ನಾದ ನಿನಾದ. ಚೆನ್ನಣ್ಣ ವಾಲೀಕಾರ– ಮರದ ಮೇಲಿನ ಗಾಳಿ, ಕರಿತಲೆ ಮಾನವನ ಜೀಪದ, ಪ್ಯಾಂಥರ್ ಪದ್ಯಗಳು ಬಂಡೆದ್ದ ದಲಿತರ ಬೀದಿ ಹಾಡುಗಳು, ದಿಕ್ಕಾರದ ಹಾಡುಗಳು. ಮುಳ್ಳೂರು ನಾಗರಾಜ–ನೆಲದ ಜೋಗುಳ, ಟಿ.ಎಂ. ಭಾಸ್ಕರ್– ಹೊಸ ದಾರಿ, ಎಲ್. ಹನುಮಂತಯ್ಯ– ಕಪ್ಪು ಕಣ್ಣಿನ ಹುಡುಗಿ,ಮಾಲತಿ ಪಟ್ಟಣಶೆಟ್ಟಿ – ಗರಿಗೆದರಿ,ಮೂಡ್ನಾಕೂಡು ಚಿನ್ನಸ್ವಾಮಿ– ಚಪ್ಪಲಿ ಮತ್ತು ನಾನು, ಅನಸೂಯಾ ಕಾಂಬಳೆ– ಮುಳ್ಳು ಕಂಟಿ ನಡುವೆ, ರಂಜಾನ್ ದರ್ಗಾ– ಕಾವ್ಯ ಬಂತು ಬೀದಿಗೆ, ಹೊಕ್ಕುಳಲ್ಲಿ ಹೂವಿದೆ, ತೇಜಸ್ವಿ ಕಟ್ಟಿಮನಿ– ಮುಂಗಾರುಮಳೆ, ಹುಡುಗಿ ಪ್ರೀತಿಸುವುದು ಹೀಗೆ, ಬಿ.ಟಿ.ಲಲಿತಾ ನಾಯಕ್– ನಂ ರೂಪ್ಲಿ, ಬರಗೂರು ರಾಮಚಂದ್ರಪ್ಪ– ಮರಕುಟಿಗ, ನೆತ್ತರಲ್ಲಿ ನೊಂದ ಹೂವು, ಗುಲಾಮ ಗೀತೆ. ಎಚ್.ಎಸ್.ಶಿವಪ್ರಕಾಶ್– ಸಮಗಾರ ಭೀಮವ್ವ, ನಿಂಗಪ್ಪ ಮುದೆನೂರು, ನಿಜಲಿಂಗಪ್ಪ ಮಟ್ಟಿಹಾಳ, ಬಸವರಾಜ ಸಬರದ– ನನ್ನವರ ಹಾಡು, ದನಿಯೆತ್ತಿ ಹಾಡೇನ, ಪದಕಟ್ಟಿ ಹಾಡೇನ ಮುಂತಾದ ಕವನ ಸಂಕಲನಗಳು. ಬಿ.ಸುಕನ್ಯಾ, ವೈ.ಎಂ.ಯಾಕೊಳ್ಳಿ, ಇನ್ನೂ ಮುಂತಾದ ಹೊಸತಲೆಮಾರಿನ ಕವಿಗಳು ದಲಿತ ಬಂಡಾಯ ಕಾವ್ಯಪರಂಪರೆಯನ್ನು ಶ್ರೀಮಂತಗೊಳಿಸಿದ್ದಾರೆ.

ಕಥೆ

ದಲಿತ ಬಂಡಾಯದ ಮುಖ್ಯ ಸ್ವರೂಪವೆಂದರೆ ಕಥನಕ್ಕೆ ಸ್ಥಳೀಯ ಆಡುಭಾಷೆಯನ್ನೆ ಬಳಸಿರುವುದು. ಆಡುಭಾಷೆಯು ಕಥೆಗಳನ್ನು ಸತ್ವಯುತವಾಗಿಸಿವೆ. ಬಾಯಿ ಮಾತು ಲಿಖಿತರೂಪದಲ್ಲಿ ಅಭಿವ್ಯಕ್ತಗೊಂಡಿದ್ದು ಈ ಘಟ್ಟದ ಕಥೆಗಳಲ್ಲಿಯೇ.

ದೇವನೂರು ಮಹಾದೇವರು ದಲಿತ- ಬಂಡಾಯ ಚಳುವಳಿಯ ಅತ್ಯಂತ ಶಕ್ತಿಶಾಲಿ ಕತೆಗಾರ, ಅವರ 1973ರಲ್ಲಿ ಪ್ರಕಟಗೊಂಡ 'ದ್ಯಾವನೂರು' ಕಥಾಸಂಕಲನ ದಲಿತ ಜಗತ್ತನ್ನು ಮೊದಲಬಾರಿಗೆ ಕನ್ನಡ ಓದುಗರ ಮುಂದೆ ತೆರೆದಿಟ್ಟು ಆ ವರ್ಗವನ್ನು ಬೆಚ್ಚಿಬೀಳಿಸಿತು.ಬಡತನ ದಾರಿದ್ರ್ಯ, ಲೈಂಗಿಕಶೋಷಣೆ, ಗ್ರಾಮೀಣ ಜಗತ್ತಿನಲ್ಲಿ ದಲಿತರ ಮೇಲೆ ಮೇಲುವರ್ಗದವರಿಂದ ನಡೆಯುವ ಎಲ್ಲಾರೀತಿಯ ಶೋಷಣೆಯ ಮುಖಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದರು ಅವು ದಾಖಲೆಗಳಾಗಿ ಕತೆಗಳಲ್ಲಿ ಒಡಮೂಡಿವೆ. ಕುಂವೀರಭದ್ರಪ್ಪನವರು ದಲಿತ ಸಮುದಾಯಗಳ ಬದುಕಿನ ಬಡತನ ಮತ್ತು ಹಸಿವನ್ನು ಸತ್ವಪೂರ್ಣವಾದ ಅಭಿವ್ಯಕ್ತಿಯ ಮೂಲಕ ಕನ್ನಡ ಕಥಾ ಸಾಹಿತ್ಯಕ್ಕೆ ಕೊಡುಗೆ ನೀಡಿದ್ದಾರೆ. ಜಮೀನುದಾರನ ಕ್ರೌರ್ಯ ಮತ್ತು ಅವರ ಕ್ರೌರ್ಯಕ್ಕೆ ಸಿಕ್ಕಿ ನರಳುವ ದಲಿತರ ಚಿತ್ರ ಇವರ ಕಥೆಗಳಲ್ಲಿ ಸಾಮಾನ್ಯವಾದ ಅಂಶವಾಗಿದೆ. ಬಿ.ಟಿ.ಲಲಿತಾನಾಯಕರ 'ಲೂಟಿ' ಕಥೆಯಲ್ಲಿ ಕೆಳವರ್ಗದ ಸಂಸ್ಕೃತಿಯ ವಿವರಗಳು ಪ್ರಕಟವಾಗಿವೆ. ಇನ್ನೂ ಮುಂತಾದ ಕಥೆಗಾರರು ದಲಿತ ಬಂಡಾಯದ ಮುಂಚೂಣಿಯಲ್ಲಿದ್ದಾರೆ.

ಇನ್ನಾದರೂ ಸಾಯಬೇಕು, ಭಗವತಿ ಕಾಡು, ಕೃಷ್ಣ ಆಲನಹಳ್ಳಿ-ತಪ್ತಲೋಕ, ಶ್ರೀಮಂತ, ಶ್ರಾವಣ, ಸಂಬಂಧ, ಹುತ್ತ, ಆಗುಂತಕ, ಫಿನಿಕ್ಸ್, ಗೀತಾನಾಗಭೂಷಣ- ಮಾಪುರ ತಾಯಿ ಮಕ್ಕಳು, ಆಸರೆಗಳು, ದುಮ್ಮಸ್ಸು, ನೋವು, ಹಸಿಮಾಂಸ ಹದ್ದುಗಳು, ನೀಲಗಂಗಾ, ಎಚ್.ನಾಗವೇಣಿ- ಗಾಂಧಿಬಂದ, ಅರವಿಂದ ಮಾಲಗತ್ತಿ – ಕಾರ್ಯ, ಆಲನಹಳ್ಳಿ ಕೃಷ್ಣ- ಭುಜಂಗಯ್ಯನ ದಶಾವತಾರ ಮುಂತಾದವು

ಪ್ರಮುಖ ಕಥಾಸಂಕಲನಗಳು-

ದ್ಯಾವನೂರು ಮಹಾದೇವ – ಮಾರಿಕೊಂಡವರು ಗ್ರಸ್ತರು, ಒಂದು ದಹನದ ಕಥೆ, ಅಮಾಸ, ದ್ಯಾವನೂರು, ಕುಂ.ವೀರಭದ್ರಪ್ಪ- ಬೇಲಿ ಮತ್ತು ಹೊಲ, ಡೋಮ ಮತ್ತು ಇತರ ಕಥೆಗಳು, ಇನ್ನಾದರೂ ಸಾಯಬೇಕು, ಭಗವತಿ ಕಾಡು ಇತ್ಯಾದಿ ಆಲನಹಳ್ಳಿ ಕೃಷ್ಣ : ತಪ್ತಲೋಕ, ಶ್ರೀಮಂತ, ಶ್ರಾವಣ, ಸಂಬಂಧ, ಹುತ್ತ, ಆಗುಂತಕ, ಗೀಜಗನ ಗೂಡು, ಅಮರೇಶ್ ನುಗಡೋಣಿ – ಮಣ್ಣು ಸೇರಿತು ಬೀಜ, ಚನ್ನಣ್ಣ ವಾಲಿಕಾರ- ಚೆನ್ನಣ್ಣನ ಕಥೆಗಳು, ಕಪ್ಪು ಕಥೆಗಳು , ಕುತ್ತದಲ್ಲಿ ಕುದ್ದವರ ಕಥೆಗಳು., ಗೀತಾ ನಾಗಭೂಷಣ-ಅವ್ವ ಮತ್ತು ಇತರ ಕಥೆಗಳು, ಹುಲಿಗ್ಯಾ, ಬರಗೂರು ರಾಮಚಂದ್ರಪ್ಪ -ಕಪ್ಪು ನೆಲದ ಕೆಂಪು ಕಾಲು, ಬಯಲಾಟದ ಭೀಮಣ್ಣ., ಮೊಗಳ್ಳಿ ಗಣೇಶ್- ಬುಗರಿ, ಮ.ನ. ಜವರಯ್ಯ – ಬುರುಡೆಗೆ ಸ್ವರ್ಗ, ಸಾರಾ ಅಬೂಬಕರ್-ಚಪ್ಪಲಿಗಳು, ಅಬ್ದುಲ್ ರಶೀದ್ -ಕಪ್ಪು ಹುಡುಗನ ಹಾಡು.

ಕಾದಂಬರಿ

ಜೀ ವೆಂಕಟಯ್ಯ- ಕನ್ನಡದ ಮೊದಲ ತಲೆಮಾರಿನ ದಲಿತ ಬರಹಗಾರ ಎಂದು ಗುರುತಿಸಿದ್ದಾರೆ. 'ನೊಂದ ಜೀವ' ಕಾದಂಬರಿಯು ಹರಿಜನರ ಸಮಸ್ಯೆ ಕುರಿತಾದ ಚಿಂತನೆ ಸುಮಾರು 1955 ಕಾಲದಲ್ಲಿ 210 ಪುಟಗಳಲ್ಲಿ ರಚನೆಗೊಂಡಿದೆ. ಇದರಲ್ಲಿ ಶ್ರೀಮಂತರದಾಹ, ಅಸ್ಪೃಶ್ಯತಾ ಸಮಸ್ಯೆ, ಕೂಲಿಕಾರರ ಸಮಸ್ಯೆ, ಕಲೆ, ನಂಬಿಕೆ, ಆಚರಣೆ, ಸಂಪ್ರದಾಯಗಳನ್ನು ಅತ್ಯಂತ ಸಹಜವಾಗಿ ಚಿತ್ರಿಸಿದ್ದಾರೆ. ಆಗ ದಲಿತ ಪದ ಬಳಕೆಯಲ್ಲಿ ಇಲ್ಲದ ಕಾರಣ ಕಾದಂಬರಿಯಲ್ಲಿ 'ಪಂಚಮ' ಪದ ಬಳಕೆಯಾಗಿದೆ. 'ಬನದ ಸೆರಗು' ಕಾದಂಬರಿಯಲ್ಲಿ ಸೋಲಿಗ ಜನಾಂಗದ ಮತ್ತು ರೈತರ ಸೌಜನ್ಯತೆಯನ್ನು ಚಿತ್ರಿಸಿದ್ದಾರೆ. ಹೊಸಗನ್ನಡ ಸಾಹಿತ್ಯ ಘಟ್ಟದಲ್ಲಿ ಕಾದಂಬರಿಯು ತನ್ನದೇ ಆದ ಸ್ಥಾನವನ್ನು ಪಡೆದುಕೊಂಡಿದೆ. ಪೌರಾಣಿಕ,ಸಾಮಾಜಿಕ,ಐತಿಹಾಸಿಕ ವಿಷಯಗಳು ಕಾದಂಬರಿಯ ವಸ್ತುಗಳಾದವು. ದಲಿತ ಬಂಡಾಯ ಸಾಹಿತ್ಯದ ಸಂದರ್ಭದಲ್ಲಿಯೂ ಕಾದಂಬರಿ ಮಹತ್ವ ಪಡೆಯಿತು.

ದೇವನೂರು ದಲಿತ-ಬಂಡಾಯ ಪಂಥದ ಅತಿಮಹತ್ವದ ಕಾದಂಬರಿಕಾರರೆಂದೇ ಪರಿಗಣಿತರಾಗಿದ್ದಾರೆ. ಅವರ ಮೊದಲ ಕಾದಂಬರಿ ಒಡಲಾಳ ಕಿರು ಕಾದಂಬರಿ. ಒಂದು ಬಡ ಕುಟುಂಬದ ಹಿರಿಯರಳಾದ ಸಾಕವ್ವ, ತನ್ನ ಕುಟುಂಬದವರ ಒಪ್ಪತ್ತಿನ ಊಟಕ್ಕಾಗಿ ಪಡಬೇಕಾಗಿ ಬರುವ ಪಾಡನ್ನು ದೇವನೂರರು ಇಲ್ಲಿ ಒಂದು ವಿಶಿಷ್ಟ ರೀತಿಯಿಂದ ವಿವರಿಸಿದ್ದಾರೆ. ಇಲ್ಲಿ ಕಥಾ ಹಂದರ ಕಿರಿದಾದರೂ ಸಾಕವ್ವನ ಕೋಳಿ ಪ್ರಸಂಗ, ಜೋಳ ಕಲಿಯುವಿಕೆಯ ಪ್ರಸಂಗ, ಪೊಲೀಸ್ ವಿಚಾರಣೆಯ ಪ್ರಸಂಗಗಳ ವಿವರಣೆಗಳು ಕಾದಂಬರಿಯ ಆಶಯವನ್ನು ಸಮರ್ಥವಾಗಿ ಬಿಂಬಿಸುತ್ತವೆ. ದಲಿತಪ್ರಜ್ಞೆಯ ಸೂಕ್ಷ್ಮ ಅಸ್ತಿತ್ವವನ್ನು ಇದರಲ್ಲಿ ಗಮನಿಸಬಹುದು.

ಎರಡನೆಯ ಕಾದಂಬರಿ ಕುಸುಮಬಾಲೆ ಇದು ಬಂಡಾಯದ ನೆರಳಿನಲ್ಲಿಯೇ ಮೂಡಿ ಬಂದ ವಿಶಿಷ್ಟ ಕಾದಂಬರಿ. ಗಂಡನನ್ನು ಕಳೆದುಕೊಂಡು 12 ತಿಂಗಳುಗಳ ಅನಂತರದಲ್ಲಿ ಹುಟ್ಟಿದವನೆಂದು ಹೇಳಲಾದ ಮಗನನ್ನು ಕಟ್ಟಿಕೊಂಡು ಕುಟುಂಬದ ಆಸ್ತಿಯಲ್ಲಿ ಪಾಲು ಕೇಳಲು ಬಂದ ಹೆಂಗಸನ್ನು ಮೈದುನರು ಅಟ್ಟಿ ಗೋಮಾಳಕ್ಕೆ ನೂಕುವುದು, ಅಲ್ಲಿ ಆಕೆ ಕಷ್ಟಪಟ್ಟು ಮಗನನ್ನು ಬೆಳೆಸಿ ಒಂದು ಸ್ಥಿತಿಗೆ ತರುವುದು, ಆ ಮಗನ ಮಗ ಮುಂದೆ ಊರಿಗೆ ದೊಡ್ಡ ಶ್ರೀಮಂತನಾಗುವುದು ಕಥೆಯ ಒಂದು ಭಾಗವಾದರೆ ಶ್ರೀಮಂತನ ಮಗಳು ಕುಸುಮಬಾಲೆ ದಲಿತ ಹುಡುಗನನ್ನು ಕೂಡಿ ಮಗುವನ್ನು ಪಡೆಯುವುದು, ಚನ್ನನ ಕೊಲೆಯಾಗುವುದು ಇದರ ಇನ್ನೊಂದು ಭಾಗವಾಗಿದೆ. ಪ್ರವೇಶಗಳು ಈ ಕಾದಂಬರಿಯಲ್ಲಿ ಇಲ್ಲದಿದ್ದರೂ ತೀವ್ರವಾಗಿರುವ ಇಲ್ಲಿ ಕಂಡುಬರುತ್ತದೆ.

ಮ.ನ.ಜವರಯ್ಯನವರ ಕಾದಂಬರಿ 'ಮಾಗಿ' ದಲಿತರ ಬದುಕಿನ ನೋವು,ಹಸಿವು,ದುಃಖ,ದುಮ್ಮಾನಗಳನ್ನು ತಾಳ್ಮೆಯಿಂದ ಅನಾವರಣ ಮಾಡುವ ಅಪೂರ್ವ ಕಾದಂಬರಿಯಾಗಿದೆ. ಒಂದೆಡೆ ಅದ್ಬುತ ರಮ್ಯ ಬದುಕಿನ ಪೈಲ್ವಾನ್ ದಾಸಪ್ಪ, ಇನ್ನೊಂದೆಡೆಯಲ್ಲಿ ಹೊಸಹರೆಯದ ವಸಂತಪ್ಪ ಇವರಿಬ್ಬರ ಮಧ್ಯೆ ದಿನದಿಂದ ದಿನಕ್ಕೆ ಮಾಗುತ್ತ ಬರುವ 'ಮಾಗಿ' ಇವರ ಸುತ್ತ ಕಾದಂಬರಿ ಹೆಣೆದುಕೊಂಡಿದೆ. ಸಾ.ರಾ.ಅಬೂಬ್ಕರರವರ 'ಸಹನಾ,ವಜ್ರಗಳು,' ಬಿ.ಟಿ.ಲಲಿತಾನಾಯಕರವರ 'ಗತಿ' ಮೊದಲಾದವರ ಕಾದಂಬರಿಗಳು ಈ ಕಾಲದಲ್ಲಿ ರಚನೆಗೊಂಡಿವೆ.

ಗೀತಾ ನಾಗಭೂಷಣ- ಅವರ ಹಸಿಮಾಂಸ ಮತ್ತು ಹದ್ದುಗಳು, ಚೈತ್ರದ ಹಾಡುಗಳು, ನೀಲಗಂಗಾ ಈ ಮೂರು ಕಾದಂಬರಿಗಳು- ಮೇಲ್ವರ್ಗದ ಲೈಂಗಿಕ ಶೋಷಣೆಗೆ ಒಳಗಾದ ದಲಿತ ಹೆಣ್ಣಿನ ಕುರಿತಾದವುಗಳಾಗಿವೆ. ಮಾಪುರ ಕಾದಂಬರಿಯಲ್ಲಿ- ದೇವರ ಹೆಸರಲ್ಲಿ ದಲಿತ ಸ್ತ್ರೀಯರ ಮೇಲಾಗುವ ಶೋಷಣೆ ಮತ್ತು ಅದನ್ನು ಮೆಟ್ಟಿನಿಂತ ಕೊನೆಗೆ ಮೇಲ್ವರ್ಗದವರಿಂದ ಹೆಣ್ಣಿನ ಕಥೆ. 'ನಿನ್ನನ್ನೇ ಪ್ರೀತಿಸಿದ್ದು'- ಲೈಂಗಿಕ ಶೋಷಣೆಯ ವಿರುದ್ಧ ಸಿಡಿದೇಳುವ ದಲಿತ ಹೆಣ್ಣುಗಳ ಕತೆ. ಮೋಹ್ವಾ- ಕಾಡಿನ ಲಂಬಾಣಿ ಜನಾಂಗದ ಮೇಲೆ ದೈವದ ಹೆಸರಿನ ಮೇಲಾಗುವ ಲೈಂಗಿಕ ಶೋಷಣೆ. ಬೆಸಗರಹಳ್ಳಿ ರಾಮಣ್ಣನವರ – ತೋಳಗಳ ನಡುವೆ, ರಕ್ತಕಣ್ಣೀರು, ಅಬೂಬಕರ್‌ವರ-ಸಹನಾ (ಬಹುಪತ್ನಿತ್ವ ಪದ್ಧತಿ ಕುರಿತಾದುದು) ವಜ್ರಗಳು (ತಲಾಖ್ ಪದ್ಧತಿ ಮತ್ತು ಸ್ತ್ರೀಯರ ಅಸಹಾಯಕತೆಯನ್ನು ಕುರಿತು ರಚನೆಯಾಗಿದೆ.ಕಾ.ತ. ಚಿಕ್ಕಣ್ಣರವರ -ಮುಂಜಾವು (ದಲಿತ ತಿಮ್ಮಾಜಿಯ ದಂಗೆ) ಮುಂತಾದವು ದಲಿತ ಬಂಡಾಯ ಸಾಹಿತ್ಯದಲ್ಲಿ ರಚನೆಯಾಗಿ ಪ್ರಮುಖ ಪಾತ್ರವಹಿಸಿದವು. ಅರವಿಂದ ಮಾಲಗತ್ತಿಯವರ – 'ಕಾರಿಯಾ' ಕೃತಿ ಅಜ್ಞಾನ ದಲಿತ ಮೌಢ್ಯ ಸಂಪ್ರದಾಯ ಜನಾಂಗದ ಸ್ಥಿತಿಯನ್ನು ಪರಿಚಯಿಸುತ್ತದೆ.

ಪ್ರಮುಖ ಕಾದಂಬರಿಗಳು –

ದ್ಯಾವನೂರು ಮಹಾದೇವ-ಒಡಲಾಳ,ಕುಸುಮಬಾಲೆ, ಸಾರಾ ಅಬೂಬಕರ್-ಚಂದ್ರಗಿರಿ ತೀರದಲ್ಲಿ,ಸಹನಾ, ಚಪ್ಪಲಿಗಳು. ಶಿವರಾಮ ಕಾರಂತ-ಚೋಮನದುಡಿ, ಎಂ ವಿ ಸೀತಾರಾಮಯ್ಯ-ಮಾವನ ಮಗಳು, ಬರಗೂರು ರಾಮಚಂದ್ರಪ್ಪ-ಸೂರ್ಯ, ಒಂದು ಊರಿನ ಕಥೆ, ಬೆಂಕಿ, ಉಕ್ಕಿನ ಕೋಟೆ, ಭರತ ನಗರಿ, ಕುಂ ವೀರಭದ್ರಪ್ಪ-ಕಪ್ಪು, ಕೆಂಡದ ಮಳೆ, ಬೇಲಿ ಮತ್ತು ಹೊಲ, ಶ್ಯಾಮಣ್ಣ, ಶಾಂತರಸ-ಸಣ್ಣ ಗೌಡಶಾನಿ, ಚಂದ್ರಕಾಂತ ಕುಸನೂರು-ನೂರ್ಜಹಾನ್, ವೀಣಾ ಶಾಂತೇಶ್ವರ-ಶೋಷಣೆ, ಮ.ನ.ಜವರಯ್ಯ-ಮಾಗಿ, ಮುಳ್ಳೂರು ನಾಗರಾಜ-ಮರಣ ಮಂಡಲ ಮಧ್ಯದೊಳಗೆ, ಚೆನ್ನಣ್ಣ ವಾಲೀಕಾರ- ಬೆಳ್ಯಾ, ಕೋಟೆಬಾಗಿಲು, ಒಂದು ಹೆಣ್ಣಿನ ಒಳಜಗತ್ತು, ಶಿವರುದ್ರಪ್ಪ ಕಲ್ಲೋಳಕರ- ಹೊಲಗೇರಿ ರಾಜಕುಮಾರ, ಬಿ.ಟಿ.ಲಲಿತಾ ನಾಯಕ್- ನೆಲೆ-ಬೆಲೆ, ಗೀತಾ ನಾಗಭೂಷಣ- ಮಾಪುರ ತಾಯಿ ಮಕ್ಕಳು, ಜೋಗಿಣಿ, ಆಸರೆಗಳು, ಹುಮ್ಮಸ್ಸು ನೋವು, ಬದುಕು, ಹಸಿಮಾಂಸ ಮತ್ತು ಹದ್ದುಗಳು, ಚಿಕ್ಕಿಯ ಹರಿಯದ ದಿನಗಳು, ನೀಲಗಂಗಾ, ದಂಗೆ, ಎಚ್ ನಾಗವೇಣಿ-ಗಾಂಧಿ ಬಂದ,

ಹೀಗೆ ಸಾಹಿತ್ಯದ ಎಲ್ಲ ಮಜಲುಗಳಲ್ಲಿ ಕೃಷಿ ಗೈದ ದಲಿತ ಬಂಡಾಯ ನೀಡಿದ ಕೊಡುಗೆ ಅಪಾರವಾದದು. ದಲಿತ ಸಾಹಿತ್ಯವನ್ನು ಒಳಗೊಂಡಿದೆ ಬಂಡಾಯ ಸಾಹಿತ್ಯ.ಈ ದಲಿತ ಬಂಡಾಯ ಸಾಹಿತ್ಯ ಖುಷಿಗಾಗಿ ಅಲ್ಲ ಸಾಂಸ್ಕೃತಿಕ ಬದಲಾವಣೆಗಳಿಗಾಗಿ ಸಂಸ್ಕೃತಿಯಲ್ಲಿ ಪ್ರತಿಷ್ಠಿತ ಮೌಲ್ಯಗಳು ಬೇಡವಾದಾಗ ಪ್ರತಿಯಾಗಿ ಅವುಗಳ ವಿರುದ್ಧ ಹೋರಾಡುವುದು ಬಂಡಾಯ ಸಾಹಿತ್ಯದಲ್ಲಿ ಬಂಡಾಯ ಸಾಹಿತ್ಯ ಎನಿಸಿದೆ. ಇತ್ತೀಚಿನ ತಲೆಮಾರಿನಲ್ಲಿ ಡಾ.ಹಣುಮಂತರಾವ್ ದೊಡ್ಡಮನಿ ಡಾ.ಡಿ ಜಿ ಹಾಜವಗೋಳ,ಡಾ.ಟಿ.ಎಂ.ಭಾಸ್ಕರ,ಡಾ.ಎಚ್.ಟಿ.ಪೋತೆ, ಡಾ.ಶಿವಾನಂದ ಕೆಳಗಿನಮನಿ, ಡಾ.ನಿಜಲಿಂಪ್ಪ ಮಟ್ಟಿಹಾಳ, ಡಾ.ಎಂ.ಡಿ.ಒಕ್ಕುಂದ, ಡಾ.ವಿನಯಾ ನಾಯಕ,ಡಾ.ರಾಜಶೇಖರ ಹತಗುಂದಿ,ಡಾ ಸೂರ್ಯಕಾಂತ ಸುಜ್ಯಾತ, ಡಾ.ಅಮೃತ ಕಟಕೆ ಡಾ. ಗಾಳೆಪ್ಪ ಪೂಜಾರ,ಅಮರೇಶ ಬಲ್ಲಿದವ, ಕೆ.ನೀಲಾ,ಜಯದೇವಿ ಗಾಯಕವಾಡ, ರಮೇಶ ಬುಳ್ಳಾ, ಶರಣಪ್ಪ ಮಾಳಗಿ ಮುಂತಾದವರೆಲ್ಲ ದಲಿತ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಸಾಧನೆಗೈಯುತ್ತಿದ್ದಾರೆ.

## ಆಧಾರ ಗ್ರಂಥಗಳು

ಬಂಡಾಯ-ದಲಿತ ಸಾಹಿತ್ಯ, ಪುರುಷೋತ್ತಮ ಬಿಳಿಮಲೆ,ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.2021

ದಲಿತ ಸಾಹಿತ್ಯ, -ಅರವಿಂದ ಮಾಲಗತ್ತಿ, ಚೇತನ ಯುಗಾಂತರ ಕನ್ನಡ ಸಾಹಿತ್ಯ, ಪ್ರ.ಸಂಪಾದಕರು: ಜಿಎಸ್ ಭಟ್

ಬಂಡಾಯ ಸಾಹಿತ್ಯ, -ಶಿವಾನಂದ ಕೆಳಗಿನಮನಿ, ಚೇತನ ಯುಗಾಂತರ ಕನ್ನಡ ಸಾಹಿತ್ಯ, ಪ್ರ.ಸಂಪಾದಕರು: ಜಿಎಸ್ ಭಟ್

ಕನ್ನಡ ಸಾಹಿತ್ಯದಲ್ಲಿ ಮನುಷ್ಯನ ಪರಿಕಲ್ಪನೆ-ಪ್ರ.ಸಂಪಾದಕರು, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.2021

ಶತಮಾನದ ಸಣ್ಣಕಥೆಗಳ ಸಮೀಕ್ಷೆ- ಕರಿಗೌಡ ಬೀಚನಹಳ್ಳಿ, ಕರ್ನಾಟಕ ಸಾಹಿತ್ಯ ಅಕಾಡಮಿ, ಬೆಂಗಳೂರು.2021

ಕನ್ನಡ ಸಾಹಿತ್ಯ ಚರಿತ್ರೆ ಒಂದು ಸಮೀಕ್ಷೆ- ಎಲ್.ಎಸ್. ಕಾಡದೇವರಮಠ ವಿದ್ಯಾನಿಧಿ ಪ್ರಕಾಶನ ಗದಗ 2004

ಕನ್ನಡ ಸಾಹಿತ್ಯ ಚರಿತ್ರೆಯ ಹೆಜ್ಜೆಗಳು- ವೈ.ವೈ. ಕೊಕ್ಕನವರ,ಸೌಮ್ಯ ಪ್ರಕಾಶನ ವಿಜಯಪುರ.

000